# ಸತ್ಯ ಸಂಗತಿ

SATHYA SANGATI KANNADA DAILY NEWS PAPER

ಹೊಸ ಆಶಯಗಳೊಂದಿಗೆ ಶಿವಮೊಗ್ಗ ಜಿಲ್ಲೆಯಲ್ಲಿ ಸುದ್ದಿಗಳ ಸರಮಾಲೆಯನ್ನೇ ಹೊತ್ತು ತರಲಿರುವ "ಸತ್ಯ ಸಂಗತಿ' ನಿಮ್ಮ ಕೈಯಲ್ಲಿ...

ದಿನಾಂಕ : 02-06-2023
ವಾರ : ಶುಕ್ರವಾರ
ಮಾಸಿಕ : 50 ರೂ.
ಬಿಡಿಪ್ರತಿ : 02 ರೂ.

Volume: 02. Issue: 28 RNI No. KARKAN/2022/82291 Date: 02-06-2023, Friday, Price: 2 Mob: 9900933653, E-mail: sathyasangatismg@gmail.com

ಸಂಪಾದಕರು – ಪ್ರಕಾಶಕರು – ವಿನೋದ ಎಸ್.ಎಲ್. ಉಪ ಸಂಪಾದಕರು – ಆರ್. ರಾಘವೇಂದ್ರ ಕಾರ್ಯನಿರ್ವಾಹಕ ಸಂಪಾದಕರು – ಡಿ. ಮಂಜುನಾಥ್




## ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಜೂ.3 ರಂದು ಸಚಿವ ಮಧು ಬಂಗಾರಪ್ಪರಿಗೆ ಅಭಿನಂದನೆ

ಶಿವಮೊಗ್ಗ: ನೂತನ ಸಚಿವರಾಗಿರುವ ಮಧು ಬಂಗಾರಪ್ಪ ಅವರನ್ನು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಜೂ.3ರಂದು ಅಭಿನಂದಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಎಸ್. ಸುಂದರೇಶ್ ಹೇಳಿದರು.

ಅವರು ಇಂದು ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಪೂರ್ಣ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದಿದೆ. ಶಿವಮೊಗ್ಗ ಜಿಲ್ಲೆಗೂ ಪ್ರಾತಿನಿಧ್ಯ ಸಿಕ್ಕಿದೆ. ಮಧು ಬಂಗಾರಪ್ಪ ಅವರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿ ಆಯ್ಕೆಯಾಗಿದ್ದಾರೆ. ಸಚಿವರಾದ ಮೇಲೆ ಮೊದಲ ಬಾರಿಗೆ ಶಿವಮೊಗ್ಗಕ್ಕೆ ಜೂ.3ರಂದು ಆಗಮಿಸಲಿದ್ದಾರೆ. ಅಂದು ಅವರನ್ನು ಜಿಲ್ಲಾ ಕಾಂಗ್ರೆಸ್ ವತಿಯಿಂದ ಹೃತ್ಪೂರ್ವಕವಾಗಿ ಸ್ವಾಗತಿಸಿ ಸನ್ಮಾನಿಸಲಾಗುವುದು ಎಂದರು.

ಮಧು ಬಂಗಾರಪ್ಪ ಅವರು ಅಂದು ಬೆಳಗ್ಗೆ ಎಂಆರ್‌ಎಸ್ ವೃತ್ತದಿಂದ ಅವರನ್ನು ಬೈಕ್ ಹಾಗೂ ವಾಹನಗಳ ರ್‍ಯಾಲಿಯ ಮೂಲಕ ಮೆರವಣಿಗೆಯಲ್ಲಿ ಕರೆತರಲಾಗುವುದು. ನಂತರ 10–30ಕ್ಕೆ ನಗರ ಲಗಾನ್ ಮಂದಿರದಲ್ಲಿ ಅಭಿನಂದಿಸಲಾಗುವುದು ಎಂದರು.

ಮಧು ಬಂಗಾರಪ್ಪ ಅವರ ಜೊತೆಗೆ ಶಾಸಕರಾಗಿ ಆಯ್ಕೆಯಾಗಿರುವ ಬೇಳೂರು ಗೋಪಾಲಕೃಷ್ಣ ಮತ್ತು ಬಿ.ಕೆ. ಸಂಗಮೇಶ್ ಅವರನ್ನು ಸನ್ಮಾನಿಸಲಾಗುವುದು. ಈ ಕಾರ್ಯಕ್ರಮಕ್ಕೆ ಪಕ್ಷದ ಹಿರಿಯ ಮುಖಂಡರಾದ ಕಾಗೋಡು ತಿಮ್ಮಪ್ಪ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು, ಮಾಜಿ ಸಚಿವರು, ಶಾಸಕರು, ಪದಾಧಿಕಾರಿಗಳು, ಕಾಂಗ್ರೆಸ್ ಕಾರ್ಯಕರ್ತರು, ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಆಗಮಿಸಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಪ್ರಮುಖರಾದ ಆರ್.ಪ್ರಸನ್ನಕುಮಾರ್, ಹೆಚ್.ಸಿ ಯೋಗೇಶ್, ಜಿ.ಡಿ. ಮಂಜುನಾಥ್, ಕಲಗೋಡು ರತ್ನಾಕರ್, ಹೆಚ್.ಎಂ. ಚಂದ್ರಶೇಖರಪ್ಪ, ಶಂಕರಘಟ್ಟ ರಮೇಶ್, ಇಸ್ಮಾಯಿಲ್ ಖಾನ್, ಚಂದ್ರಭೂಪಾಲ್, ಬಲದೇವಕೃಷ್ಣ, ವಿಶ್ವನಾಥ ಕಾಶಿ, ರಮೇಶ್ ಇಕ್ಕೇರಿ, ಎನ್.ಡಿ. ಪ್ರವೀಣ ಕುಮಾರ್, ಚಂದನ್ ಇದ್ದರು.

## ಜೂ. 4 ರಂದು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಂಸ್ಥಾಪನಾ ದಿನಚರಣೆ

ಶಿವಮೊಗ್ಗ: 60 ವರ್ಷದ ಸಂಭ್ರಮದಲ್ಲಿರುವ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಂಸ್ಥಾಪನಾ ದಿನಚರಣೆಯನ್ನು ಜೂ.4ರಂದು ಬೆಳಿಗ್ಗೆ 10–15ಕ್ಕೆ ಸಂಘದ ಶಾಂತಲಾ ಸ್ಪೆರೋಕಾಸ್ಟ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್. ಗೋಪಿನಾಥ್ ಹೇಳಿದರು.




ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘವು ವಜ್ರ ಮಹೋತ್ಸವದ ಆಚರಣೆಯ ಸಂಭ್ರಮದಲ್ಲಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸಂಘದ ಪಾತ್ರ ಮುಖ್ಯವಾಗಿದೆ. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಸಂಪರ್ಕದೊಂದಿಗೆ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತಿದೆ. ಹೀಗಾಗಿ ಸಂಘದ ಬೆಳವಣಿಗೆಗೆ ಕಾರಣರಾದವರಿಗೆ ಕೃತಜ್ಞತೆ ಸಲ್ಲಿಸುವುದು ಮತ್ತು ವಿಶೇಷ ಪುರಸ್ಕಾರ ನೀಡುವ ಉದ್ದೇಶದಿಂದ ಸಂಸ್ಥಾಪಕರ ದಿನಾಚರಣೆ ಆಚರಿಸುತ್ತಿದ್ದೇವೆ ಎಂದರು.

ದಿ. ಬಿ.ಎಂ. ನಂಜಪ್ಪ ಹಾಗೂ ದಿ. ಹೆಚ್.ಎಸ್. ಚನ್ನಬಸಪ್ಪನವರ ಕಲ್ಪನೆಯ ಕೂಸು ಇದಾಗಿದೆ. ದಿ. ಆರ್.ಎಸ್. ಅಶ್ವತ್ಥನಾರಾಯಣ ಅವರು ಸ್ಥಾಪಕ ಅಧ್ಯಕ್ಷರಾಗಿದ್ದರು. ನಂತರ ಹಲವಾರು ಪ್ರತಿಭಾವಂತರು ಈ ಸಂಘದ ಅಧ್ಯಕ್ಷರಾಗಿ ಕೈಗಾರಿಕಾ ಮತ್ತು ವಾಣಿಜ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಸಂಘದ ಕಾರ್ಯದರ್ಶಿ ವಸಂತ್ ಹೋಬಳಿದಾರ್ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿ ಕರ್ನಾಟಕ ವಾಣಿಜ್ಯ ಮತ್ತುಕೈಗಾರಿಕಾ ಮಹಾ ಸಂಸ್ಥೆಯ ಅಧ್ಯಕ್ಷ ಬಿ.ವಿ. ಗೋಪಾಲರೆಡ್ಡಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. 2023ನೇ ಸಾಲಿನ ವಾಣಿಜ್ಯ ಪ್ರಶಸ್ತಿಯನ್ನು ಸುಧಾ ಟ್ರೇಡರ್ಸ್‌ನ ರಾಘವೇಂದ್ರ ರಾವ್ ಮತ್ತು ಪಾಲುದಾರರಿಗೆ ಎಪಿಎಂಸಿ ಆವರಣದಲ್ಲಿರುವ ಶಿವಲಿಂಗೇಶ್ವರ ಅರೆಕಾನಟ್ ಟ್ರೇಡರ್ಸ್‌ನ ಬಿ.ಎಂ. ಶಂಕರಪ್ಪ ಮತ್ತು ಪಾಲುದಾರರಿಗೆ, ಆಟೋ ಕಾಂಪ್ಲೆಕ್ಸ್‌ನ ಶ್ರೀ ಮಲ್ಲಿಕಾರ್ಜುನ ಆಗ್ರೋ ಸ್ಪೇರ್ಸ್‌ನ ಎಂ.ಎಂ. ಸುರೇಶ್ ಮತ್ತು ಪಾಲುದಾರರಿಗೆ ನೀಡಲಾಗಿದ್ದು, ಅವರನ್ನು ಸನ್ಮಾನಿಸಲಾಗುವುದು ಎಂದರು.

ಹಾಗೆಯೇ ಬಸ್ ಮಾಲೀಕ ಆರ್. ರಂಗಪ್ಪ, ಅಂತರರಾಷ್ಟ್ರೀಯ ಯೋಗ ಪಟು ಸವಿತಾ ಮಾಧವ್, ರಾಜ್ಯ ಜ್ಯುವೆಲ್ಲರಿ ಫೆಡರೇಷನ್ನಿನ ಉಪಾಧ್ಯಕ್ಷ ವಿನೋದ್‌ಕುಮಾರ್ ಜೈನ್ ಅವರಿಗೆ ವಿಶೇಷ ಪುರಸ್ಕಾರ ನೀಡಿ ಸನ್ಮಾನಿಸಲಾಗುವುದು ಎಂದರು.

ಹಾಗೆಯೇ ಸಂಸ್ಥಾಪಕರ ದಿನಾಚರಣೆಯ ಅಂಗವಾಗಿ ಹತ್ತು ಸ್ಟಾಲ್‌ಗಳನ್ನು ನಿರ್ಮಿಸಿ ಉತ್ಪನ್ನಗಳನ್ನು ಮಾರಾಟ ಮಾಡಲು ಉದ್ಯಮಿಗಳಿಗೆ ಅವಕಾಶ ಕಲ್ಪಿಸಲಾಗುವುದು. ಹಾಗೆಯೇ ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದಂತೆ ವಿಶೇಷ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಬಿ. ಗೋಪಿನಾಥ್ ಜಂಟಿ ಕಾರ್ಯದರ್ಶಿ ಜಿ. ವಿಜಯಕುಮಾರ್, ನಿರ್ದೇಶಕರುಗಳಾದ ಬಿ.ಆರ್. ಸಂತೋಷ್, ಇ. ಪರಮೇಶ್ವರ, ಮರಿಸ್ವಾಮಿ, ಗಣೇಶ್ ಎಂ. ಅಂಗಡಿ, ವಿಶೇಷ ಆಹ್ವಾನಿತ ಎಂ.ಎ. ರಮೇಶ್ ಹೆಗಡೆ ಉಪಸ್ಥಿತರಿದ್ದರು.

## ಹಿಂದುಳಿದ ವರ್ಗ ಸಮುದಾಯಗಳ ಬೇಡಿಕೆ ಈಡೇರಿಸಲು ಒತ್ತಾಯ




ಶಿವಮೊಗ್ಗ: ಹಿಂದುಳಿದ ವರ್ಗ ಸಮುದಾಯಗಳ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ಹಿಂದುಳಿದ ಜನಜಾಗೃತಿ ವೇದಿಕೆಯ ಪ್ರೊ. ಹೆಚ್. ರಾಚಪ್ಪ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಮೀಡಿಯಾ ಹೌಸ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದಾಗಿನಿಂದಲೂ ಹಿಂದುಳಿದ ವರ್ಗಕ್ಕೆ ಸಾಮಾಜಿಕ ನ್ಯಾಯ ಒದಗಿಸಲು ಹಲವಾರು ಆಯೋಗ ಮತ್ತು ಸಮಿತಿ ರಚನೆ ಮಾಡಿ, ಅನೇಕ ಬಾರಿ ವರದಿ ನೀಡಿದ್ದರೂ ಸಹ ಯಾವುದೇ ಸರ್ಕಾರಗಳು ಅದನ್ನು ಕಾರ್ಯರೂಪಕ್ಕೆ ತರಲು ಹಿಂದೇಟು ಹಾಕುತ್ತಾ ಬಂದಿವೆ. ಸಾಮಾಜಿಕ ಮತ್ತು ಆರ್ಥಿಕ, ಶೈಕ್ಷಣಿಕ ನ್ಯಾಯ ಒದಗಿಸಲು ಇದರಿಂದ ಸಾಧ್ಯವಾಗಿಲ್ಲ ಎಂದ ಅವರು, 2019ರಲ್ಲಿ ಹೆಚ್. ಕಾಂತರಾಜು ಅವರ ಆಯೋಗದ ನೇತೃತ್ವದಲ್ಲಿ ನಡೆದ ಸಾಮಾಜಿಕ ಮತ್ತ ಶೈಕ್ಷಣಿಕ ಜಾತಿವಾರು ಸಮೀಕ್ಷೆ ವರದಿಯನ್ನು ಕೂಡಲೇ ಸರ್ಕಾರ ಅಂಗೀಕರಿಸಿ ನ್ಯಾಯ ಒದಗಿಸದಿದ್ದರೆ ಮುಂಬರುವ ದಿನಗಳಲ್ಲಿ ಹೋರಾಟ ಅನಿವಾರ್ಯ ಎಂದರು.

ವೇದಿಕೆ ಅಧ್ಯಕ್ಷರಾದ ತೀ.ನ. ಶ್ರೀನಿವಾಸ ಮಾತನಾಡಿ, ಕಾಂತರಾಜ್ ವರದಿ ಆದರಿಸಿ ಹಿಂದುಳಿದ ವರ್ಗಗಳಿಗೆ ಕೂಡಲೇ ಎಲ್ಲಾ ರೀತಿಯ ಸೌಲಭ್ಯ ಒದಗಿಸಬೇಕು. ವಿಧಾನಸಭೆ ಮತ್ತು ಲೋಕಸಭೆಯಲ್ಲಿಯೂ ಸಹ ಎಸ್‌ಸಿ/ಎಸ್‌ಟಿಗೆ ಮೀಸಲಿಟ್ಟಂತೆ ಹಿಂದುಳಿದ ವರ್ಗಗಳಿಗೂ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಮೀಸಲಾಗಿ ನೀಡಬೇಕು. ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಕೈಗೊಂಡಿರುವ ಚೈತನ್ಯ ಸ್ವಯಂ ಉದ್ಯೋಗ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ಚೈತನ್ಯ ಸಬ್ಸಿಡಿ, ಸಾಫ್ಟ್ ಲೋನ್ ಯೋಜನೆ, ಕಿರುಸಾಲ ಯೋಜನೆ, ಸಾಂಪ್ರದಾಯಿಕ ಕುಶಲ ಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಸಾಲ–ಸಹಾಯಧನ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳು ಸ್ಥಗಿತಗೊಂಡಿದ್ದು, ಕೂಡಲೇ ಹಣ ಬಿಡುಗಡೆಗೊಳಿಸಿ ಶೀಘ್ರ ಜಾರಿಗೊಳಿಸಬೇಕು ಎಂದರು.

ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಶೀಘ್ರ ಕ್ರಮ ಕೈಗೊಳ್ಳಬೇಕು. ಪ್ರವರ್ಗ 1 ಮತ್ತು 2ಎನಲ್ಲಿ ಸುಮಾರು ಎರಡು ಕೋಟಿಯಷ್ಟು ಜನಸಂಖ್ಯೆ ಹೊಂದಿದ್ದು, ಕೇವಲ 80ಕೋಟಿ ಹಣ ಮಾತ್ರ ಮೀಸಲಿಟ್ಟಿದ್ದು, 20ಕೋಟಿ ಹಣ ಮಾತ್ರ ಬಿಡುಗಡೆಗೊಳಿಸಿದೆ. ಹಾಗಾಗಿ ಈ ವರ್ಗಗಳ ಅಭಿವೃದ್ಧಿಗಾಗಿ ದೇವರಾಜ ಅರಸು ಅಭಿವೃದ್ಧಿ ನಿಗಮಕ್ಕೆ 2ಸಾವಿರ ಕೋಟಿರೂ. ನೀಡಬೇಕೆಂದು ಅವರು ಸರ್ಕಾರಕ್ಕೆ ಒತ್ತಾಯಿಸಿದರು.

ಸುಪ್ರೀಂ ಕೋರ್ಟ್ ಕೂಡ ಕಾಂತರಾಜ್ ವರದಿ ಜಾರಿಗೊಳಿಸಲು ಸೂಚಿಸಿದೆ. ಸಿದ್ದರಾಮಯ್ಯ ಸರ್ಕಾರ ತಮ್ಮದೇ ಕೂಸನ್ನು ನಿರ್ಲಕ್ಷಿಸದೆ ಕೂಡಲೇ ವರದಿ ಅಂಗೀಕರಿಸಿ ಜಾರಿಗೊಳಿಸಬೇಕು. ಗ್ಯಾರಂಟಿಗಳು ತಾತ್ಕಾಲಿಕ. ಹಿಂದುಳಿದ ವರ್ಗದ ಕಾಂತರಾಜ್ ವರದಿಯನ್ನು ಕೂಡಲೇ ಜಾರಿಗೊಳಿಸಿ ಆ ವರ್ಗಕ್ಕೆ ನ್ಯಾಯ ಒದಗಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಸಿ.ಬಿ.ಮನೋಹರ ಕುಮಾರ್, ಡಿ.ಆರ್. ಉಮೇಶ್, ಚನ್ನವೀರಪ್ಪ ಗಾಮನಗಟ್ಟಿ, ಬಿ. ಜನಮೇಜಿರಾವ್, ರಾಮಕೃಷ್ಣ ಎಸ್., ಆರ್.ಟಿ.ನಟರಾಜ್ ಮತ್ತಿತರರಿದ್ದರು.


ಜಾಹೀರಾತಿಗಾಗಿ ಸಂಪರ್ಕಿಸಿ 9900933653


## ಜೂ.3 ರಂದು ನರೇನ್ ಫಿಟ್‌ನೆಸ್ ಜಿಮ್ ಆರಂಭ

ಶಿವಮೊಗ್ಗ: ವಿನೋಬನಗರದ ಡಿವಿಎಸ್ ಶಾಲೆ ಎದುರಿನಲ್ಲಿ ನಿರ್ಮಿಸಿರುವ ಎ–3 ಆರ್ಕೆಡ್ ಕಟ್ಟಡದಲ್ಲಿ ನರೇನ್ ಫಿಟ್‌ನೆಸ್ ಜಿಮ್‌ನ ಉದ್ಘಾಟನೆಯನ್ನು ಜೂ.3ರ ನಾಳೆ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಫಿಟ್‌ನೆಸ್ ಸೆಂಟರ್‌ನ ಎಸ್. ನರೇಂದ್ರ ಹೇಳಿದರು.

ಅವರು ಇಂದು ಜಿಮ್ ಸೆಂಟರ್‌ನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಶಾಸಕ ಎಸ್.ಎನ್. ಚನ್ನಬಸಪ್ಪ, ಸಂಸದ ಬಿವೈ. ರಾಘವೇಂದ್ರ, ಎಸ್‌ಪಿ ಮಿಥುನ್‌ಕುಮಾರ್ ಜಿ.ಕೆ. ಸರ್ಜಿ ಆಸ್ಪತ್ರೆಯ ವೈದ್ಯ ಧನಂಜಯ ಸರ್ಜಿ, ಚಲನಚಿತ್ರ ತಾರೆ ಸಮೀಕ್ಷಾ ಆಗಮಿಸಲಿದ್ದಾರೆ ಎಂದರು.

ವಿಶೇಷ ಆಹ್ವಾನಿತರಾಗಿ ಡಾ. ಲೋಕೇಶ್, ಮಾಜಿ ಸಂಸದ ಆಯನೂರು ಮಂಜುನಾಥ್, ಮಾಜಿ ಶಾಸಕ ಕೆ.ಬಿ.ಪ್ರಸನ್ನಕುಮಾರ್, ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಕ್ರೀಡಾಸಾಧಕರಾದ ಅರ್ಜುನ ಪ್ರಶಸ್ತಿ ವಿಜೇತ ಎಸ್. ಪ್ರಕಾಶ್, ಏಕಲವ್ಯ ಪ್ರಶಸ್ತಿ ವಿಜೇತರಾದ ಎಂ.ಎಂ ಗೋಪಿ,ನಾಗರಾಜ, ಭಾರತಿ ಅನಿಲ್‌ಕುಮಾರ್, ಶೈಲಜಾ ಕೆ.ಎನ್, ರಾಜ್ಯ ಪ್ರಶಸ್ತಿ ವಿಜೇತ ಸಂಜೀವ ರಾಜಶೇಖ ರಕನಕ., ಏಷ್ಯನ್ ಮೆಡಲಿಸ್ಟ್ ಅಬ್ದುಲ್ ಜಾಫರ್, ಮಿಸ್ಟರ್ ಇಂಡಿಯಾ ಮೆಡಲಿಸ್ಟ್‌ಗಳಾದ ಆಕಾಶ್, ಲೋಕೇಶ್ ಪಟೇಲ್ ಅವರನ್ನು ಸನ್ಮಾನಿಸಲಾಗುವುದು ಮತ್ತು ಹಿರಿಯ ಕ್ರೀಡಾಪಟುಗಳಾದ ಸತೀಶ್‌ಕುಮಾರ್, ಗೋವಿಂದಣ್ಣ, ಜಯಪ್ರಕಾಶ್ ಕಳ್ಳಿ, ವಿಕ್ಟರ್ ಡಿಸೋಜ್, ಡೇವಿಡ್ ಪ್ರಕಾಶ್, ಪ್ರಕಾಶ್‌ರವರನ್ನು ಸನ್ಮಾನಿಸಲಾಗುವುದು ಎಂದರು.

ನರೇನ್ ಫಿಟ್‌ನೆಸ್‌ನ ತರಬೇತುದಾರ ರೋಹನ್ ಮಾತನಾಡಿ, ನರೇನ್ ಫಿಟ್‌ನೆಸ್ ಶಿವಮೊಗ್ಗದಲ್ಲಿಯೇ ಅತ್ಯುತ್ತಮ ಜಿಮ್ ಆಗಿದೆ. ವಿಶಾಲವಾದ ಎರಡು ಅಂತಸ್ತಿನಲ್ಲಿ ತರಬೇತಿ ನೀಡಲಾಗುವುದು. ಮುಖ್ಯವಾಗಿ ಕಾರ್ಡಿಯೊ, ಸ್ಟ್ರೆಂಥ್ ಟ್ರೈನಿಂಗ್, ಗ್ರೂಪ್ ಕ್ಲಾಸ್, ಕ್ರಾಸ್ ಫಿಟ್, ವರ್ಕೌಟ್‌ಗಳಿಗೆ ವಿಶೇಷ ಸ್ಥಳಾವಕಾಶ ಇದೆ. ಜೊತೆಗೆ ಸ್ಟೀಂ, ಶವರ್ ಬಾತ್ ವ್ಯವಸ್ಥೆ ಇದೆ. ಎಸಿ ವ್ಯವಸ್ಥೆ ಇದೆ. ಅಡ್ವಾನ್ಸ್ಡ್, ಕಾಂಪೊಸಿಷನ್, ಅನಲೈಸಿಂಗ್ ಮೆಷಿನ್, ಕಸ್ಟಮರ್ ಮೊಬೈಲ್ ಆಪ್ ಸೌಲಭ್ಯ ಕೂಡ ಇದೆ ಎಂದರು.


ಪತ್ರಿಕಾ ಗೋಷ್ಠಿಯಲ್ಲಿ ಎಂಡಿ. ರಾಹುಲ್ ನರೇನ್, ತರಬೇತುದಾರರಾದ ನಾಗೇಂದ್ರ, ಮೇಘಾ, ವೀಣಾ, ಚೇತನ್ ಉಪಸ್ಥಿತರಿದ್ದರು.



ಶಿವಮೊಗ್ಗ: ಪರಿಸರ ಪ್ರೇಮಿಗಳಾದ ಪ್ರಕಾಶ್ ಪ್ರಭು, ಲಕ್ಷ್ಮಿನಾರಾಯಣ ಕಾಶಿಮತ್ತು ಉಮೇಶ್ ಅವರು ನೂತನ ಶಾಸಕ ಎಸ್.ಎನ್. ಚನ್ನಬಸಪ್ಪ ಅವರನ್ನು ಅವರ ಕಚೇರಿಯಲ್ಲಿ ಭೇಟಿ ಮಾಡಿ ಶುಭಾಶಯ ಕೋರಿದರು.

## ವೇಣುಗೋಪಾಲನ್ ಮಾತೃ ಹೃದಯ ಹೊಂದಿದ ಕಾರ್ಮಿಕ ನಾಯಕ

ಶಿವಮೊಗ್ಗ: ವೇಣುಗೋಪಾಲನ್ ಅವರು ಮಾತೃ ಹೃದಯವನ್ನು ಹೊಂದಿದ್ದ ಕಾರ್ಮಿಕ ನಾಯಕರಾಗಿದ್ದರು. ಶಿವಮೊಗ್ಗ ಜಿಲ್ಲೆಯಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ ಹಾಗೂ ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಬಲಿಷ್ಠವಾಗಿ ಬೆಳೆಯಲು ಅವರ ಶ್ರಮ ಸಾಕ್ಷಿದೆ ಎಂದು ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ಅಖಿಲ ಭಾರತ ಸಹ ಖಜಾಂಚಿ ಕೆ.ರಾಘವೇಂದ್ರ ನಾಯರಿ ಹೇಳಿದರು.




ಅವರು ಶಿವಮೊಗ್ಗದ ಕೆನರಾ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಿದ್ದ ಬಿ.ವೇಣುಗೋಪಾಲನ್ ಅವರ ನಿವೃತ್ತಿಯ ಅಂಗವಾಗಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ಬಿ.ವೇಣುಗೋಪಾಲನ್ ಅವರು ಕೆನರಾ ಬ್ಯಾಂಕಿನಲ್ಲಿ 40 ವರ್ಷ ಸೇವೆ ಸಲ್ಲಿಸುವುದರ ಜೊತೆಗೆ ಬ್ಯಾಂಕ್ ನೌಕರರ ನಾಯಕನಾಗಿ ಸದಸ್ಯರಿಗೆ ಸಲ್ಲಬೇಕಾದ ಅನೇಕ ಸೌಲಭ್ಯಗಳನ್ನು ಹೋರಾಟದ ಮೂಲಕ ಕೊಡಿಸಿದ್ದರು ಎಂದು ಕೆ.ರಾಘವೇಂದ್ರ ನಾಯರಿಯವರು ವೇಣುಗೋಪಾಲನ್ ಅವರ ಸೇವೆಯನ್ನು ಶ್ಲಾಘಿಸಿದರು.


ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್, ಶಿವಮೊಗ್ಗ ಜಿಲ್ಲಾ ಘಟಕ ಆಯೋಜಿಸಿದ್ದ ಈ ಸಮಾರಂಭದಲ್ಲಿ ಯೂನಿಯನ್‌ನ ರಾಜ್ಯ ಸಮಿತಿ ಸದಸ್ಯರುಗಳಾದ ಶಿವಮೊಗ್ಗದ ಸುಧಾಕರ ಪ್ರಭು, ಚಿಕ್ಕಮಗಳೂರಿನ ಕೆ.ಆರ್. ಬಸವರಾಜ್, ದಾವಣಗೆರೆಯ ಕೆ.ವಿಶ್ವನಾಥ ಬಿಲ್ಲವ, ಆರ್ ಆಂಜನೇಯ ಹಾಗೂ ಮುಖಂಡರುಗಳಾದ ಶಿಕಾರಿಪುರ ಮಹೇಶ್ವರಪ್ಪ, ಮಿಥುನ್ ಗೌಡ, ರಾಜೇಂದ್ರ ಪೈ, ಪರಮೇಶ್, ದುರ್ಗಪ್ಪ, ರಘು, ನರಸಮ್ಮ, ಶ್ರುತಿ ಮುರುಡೇಶ್ವರ, ಶ್ರಾವಣಿ, ವೇಣುಗೋಪಾಲನ್ ಮಂಜುಳಾ ಬಾಯಿ, ಗೀತಾ, ಕ್ಷಮಾ, ಚಂದ್ರಿಕಾ, ಶೈಲಜಾ, ಸುಮನ, ಶಿಲ್ಪಶ್ರೀ ಹಾಗೂ ವೇಣುಗೋಪಾಲನ್ ಕುಟುಂಬವರ್ಗದ ಗೀತಾ ವೇಣುಗೋಪಾಲನ್, ಸ್ನೇಹಾ, ಸಂಕಲ್ಪ ವೇಣುಗೋಪಾಲನ್ ಹಾಗೂ ಕೆನರಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್‌ನ ನೂರಾರು ಸದಸ್ಯರು ಭಾಗವಹಿಸಿ ವೇಣುಗೋಪಾಲನ್ ಅವರನ್ನು ಅಭಿನಂದಿಸಿ ಗೌರವಿಸಿದರು.

ಸಂದರ್ಭದಲ್ಲಿ ಮಾತನಾಡಿದ ಬಿ.ವೇಣುಗೋಪಾಲನ್ ಅವರು, ದೇಶದ ಅಗ್ರಗಣ್ಯ ಬ್ಯಾಂಕುಗಳಲ್ಲಿ ಒಂದಾದ ಕೆನರಾ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆತಿದ್ದರಿಂದ ನನಗೆ ಸಾರ್ವಜನಿಕವಾಗಿ ಮತ್ತು ನಮ್ಮ ಸಂಘದ ಸದಸ್ಯರಿಗೆ ಸೇವೆ ನೀಡಲು ಅವಕಾಶ ದೊರೆಯಿತು. ಬ್ಯಾಂಕಿಗೂ ಹಾಗೂ ಕಾರ್ಮಿಕ ಸಂಘಕ್ಕೂ ಪ್ರಾಮಾಣಿಕ ಸೇವೆ ಸಲ್ಲಿಸಿದ ಆತ್ಮ ತೃಪ್ತಿಯಿಂದ ಸೇವಾ ನಿವೃತ್ತಿ ಹೊಂದುತ್ತಿದ್ದೇನೆ. ಮುಂದೆ ಸಹ ಕಾರ್ಮಿಕ ವರ್ಗದ ಸೇವೆ ಮುಂದು ವರಿಸುವ ಇರಾದೆ ಹೊಂದಿದ್ದೇನೆ ಎಂದರು.

## ಏಷಿಯನ್ ಗೇಮ್ಸ್ ಆಯ್ಕೆ ಸಮಿತಿಗೆ ರಾಜ್ಯದ ಸಿಆರ್‌ಫಿಎಫ್ ಕರಾಟೆ ಕೋಚ್ ನೇಮಕ

### ಕರ್ನಾಟಕ ರಾಜ್ಯ ಕರಾಟೆ ಅಸೋಸಿಯೇಷನ್ ಅಭಿನಂದನೆ

**ಸತ್ಯಸಂಗತಿ ಸುದ್ದಿ,** ನವದೆಹಲಿ: ಮುಂದಿನ ನವಂಬರ್‌ನಲ್ಲಿ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಕರಾಟೆ ತಂಡ ಭಾಗವಹಿಸುತ್ತಿದ್ದು, ಸದರಿ ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯನ್ನು ಭಾರತೀಯ ಕ್ರೀಡಾ ಪ್ರಾಧಿಕಾರ ನೇಮಕ ಮಾಡಿದ್ದು, ನೇಮಕವಾಗಿರುವ ನಾಲ್ಕು ಜನರಲ್ಲಿ ಕರ್ನಾಟಕ ರಾಜ್ಯದ ದಾವಣಗೆರೆ ಜಿಲ್ಲೆಯ ಸಿಆರ್‌ಫಿಎಫ್ ಕರಾಟೆ ಕೋಚ್ ನೇಮಕ ಮಾಲತೇಶ್ ರವರು ಮೊದಲಿಗರಾಗಿದ್ದು, ಮಾಲತೇಶ್ ಅವರು ಏಷ್ಯನ್ ಕರಾಟೆ ಫೆಡರೇಷನ್ ಜಡ್ಜ್ ಆಗಿದ್ದು, ಈ ಹಿಂದೆ ನಡೆದ ಖೇಲೋ ಇಂಡಿಯಾ ಕ್ರೀಡಾಕೂಟಗಳು ಹಾಗೂ ಎಐಯು ಕ್ರೀಡಾಕೂಟಗಳಲ್ಲಿ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದ ಅನುಭವನನ್ನು ಹೊಂದಿದ್ದು, ಬಹುಮುಖ್ಯವಾಗಿ ಭಾರತದ ಪಿಆರ್‌ಪಿಎಫ್ ಕರಾಟೆ ಕೋಚ್ ಆಗಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ವಿಶೇಷವಾಗಿದ್ದು, ನೇಮಕವಾಗಿರುವ ಮಾಲತೇಶ್ ಅವರಿಗೆ ದೇಶದ ಕರಾಟೆ ಕ್ರೀಡಾಪಟುಗಳು ಸೇರಿದಂತೆ ಕರ್ನಾಟಕ ರಾಜ್ಯ ಕರಾಟೆ ಅಸೋಷಿಯೇಷನ್ ಅಭಿನಂದನೆಗಳನ್ನು ತಿಳಿಸಿದೆ.



ಇವರು ಆಲ್ ಇಂಡಿಯಾ ಪೊಲೀಸ್ ಗೇಮ್ಸ್‌ನಲ್ಲಿ ಪದಕ ವಿಜೇತರು ಸಹ ಆಗಿದ್ದಾರೆ.

ಆತ್ಮೀಯರೆ, ...ಇವುಗಳು ನಮ್ಮ ನಿಮ್ಮೆಲ್ಲರ ಬದುಕಿನೊಳ ಹೊರಗಿನ ವಿವಿಧ ರೀತಿಯ ಫಲಕುಗಳು,,,ಝುಲಕುಗಳು,,, ತಟ್ಟನೆ ಮನಮುಟ್ಟಿ..ನಮ್ಮ ಹೃದಯ ತಟ್ಟಿ,, ಮತ್ತೆ ಮನ ನೇವರಿಸಿ, ನವಿರಾಗಿಸಿ ,,ಹಗುರಾಗಿಸಿ ಕಣ್ಣಂಚ ಹಸಿಯಾಗಿಸುವ ಹನಿಗಳು.ಅಕ್ಷರ ರೂಪದ ಖನಿಗಳು. ಒಂದಿಲ್ಲೊಮ್ಮೆ ಎಲ್ಲರಿಗೂ ಒಡಮೂಡುವ ಬದುಕಿನ ಒಡನಾಡಿಯಾಗುವ ಒಲವಿನ ಒತ್ತಾಸೆಯ ಅಥವಾ ಒತ್ತಡದ ಕ್ಷಣಗಳಿವು, ಬದುಕಿನ ಬಗೆ ಬಗೆಯ ಭಕ್ಷ್ಯಗಳಿವು.

ಸಹೃದಯಿ ಓದುಗರೆ ನಿಮಗಾಗಿಯೆ ಈ ಅಕ್ಷರಮಾಲೆ ಇದೋ ಒಪ್ಪಿಸಿಕೊಳ್ಳಿ..

### 1) ಬಿಂಕ

ಬಿಟ್ಟು ಬಿಡು ಬದುಕಲಿ
ಬಿಂಕ ಬಿಗುಮಾನ..
ಸ್ವೀಕರಿಸೆಲ್ಲಾ ಸನ್ಮಾನ ಅವಮಾನ
ಇದಲ್ಲವೇ ಹೇಳು ಜಾಣನಾದವನ
ಜಾಯಮಾನ

### 2) ದುರಸ್ತಿ

ಆಗಲೇಬೇಕಿದೆ
ರಾಜಕಾರಣದೊಳಗೊಂದು
ದುರಸ್ತಿ...
ಇಲ್ಲವಾದರೆ ಕರಗದೆಂದಿಗೂ
ಈ ರಾಜಕಾರಣಿಗಳ ಸ್ಥಿರಾಸ್ತಿ .

### 3) ಪ್ರವಾಸ

ಸತಿಯೊಂದಿಗಾದರೆ ಪತಿಗೆ
ಪ್ರಯಾಣವೆಂಬುದು ಗಜಪ್ರಸವದ
ಪ್ರಯಾಸ.....
ಅವಳ ಸವತಿಯೊಂದಿಗಾದರೆ
ಪ್ರಯಾಸವೆನಿಸದು ಆ ಪ್ರವಾಸ .

### 4) ವಿನಾಶ

ಪ್ರಕೃತಿಯ ಜೊತೆಗೆ ಸಾಗುತಿರೆ
ಬದುಕಲಾಗುವುದು
ವಿಕಾಸ.....
ವಿಕೃತಿ ಮೆರೆದಿದ್ದಾರೆ ನಾವು
ತಪ್ಪದೆಂದಿಗೂ ನಮ್ಮ ವಿನಾಶ

### 5) ರಿಪೇರಿ

ನಿಲದೆ ಸಾಗಿದೆ ಮನೆಯಲಿ
ಮನದರಸಿಯ ಸಂಗೀತ
ಕಛೇರಿ....
ಆಗಬಹುದೇನೋ..ನನ್ನ
ಕರ್ಣಗಳೆರಡು ರಿಪೇರಿ

### 6) ಮೌನ

ಭಾವದಲಿಖಿತ ರೂಪವದು ಮೌನ
ಅನುಸಂಧಾನದೊಳಗಾಗುವುದು
ಧ್ಯಾನ...
ಶಬ್ದಗಳಾದಾಗ ಸ್ತಬ್ಧ ..
ಅನಂತವೆಲ್ಲಾ ನೀರವ ನಿಶ್ಯಬ್ದ.



ರಚನೆ ಬಿ.ಎಂ. ಪ್ರಮೀಳ
ವಿಜ್ಞಾನ ಶಿಕ್ಷಕರು
ಚಿಕ್ಕಬಳ್ಳಾಪುರ

# "ಉತ್ತರ ಕರ್ನಾಟಕದ ಜ್ಞಾನದೇಗುಲ ನನ್ನ ಕೆ.ಸಿ.ಡಿ."



ಉತ್ತರ ಕರ್ನಾಟಕದ ಸುಪ್ರಸಿದ್ಧ ಜ್ಞಾನ ಮಂದಿರ, ಹೆಸರು ಕೇಳಿದಾಕ್ಷಣ ಮನದಲ್ಲೊಂದು ಪುಳಕ, ಎದೆಯಲ್ಲೊಂದು ತವಕ ; ಅದುವೇ ಕರ್ನಾಟಕ ಕಾಲೇಜಿನ ವಿಶಿಷ್ಟೆ !

ಶತಮಾನವನ್ನು ಆಚರಿಸಿಕೊಂಡಿ ರುವ ಕರ್ನಾಟಕ ಕಾಲೇಜು ಪ್ರಾಚೀನ ಕಾಲದಿಂದಲೂ ತನ್ನ ಹಿರಿಮೆ ಗರಿಮೆಯನ್ನು ನಾಡಿನ ಉದ್ದಗಲಕ್ಕೂ ಹರಡಿಸುತ್ತ ಮುಂದೆ ಸಾಗುತ್ತಿದೆ. ಉತ್ತರ ಕರ್ನಾಟಕದ ವಿದ್ಯಾಕಾಶಿ (ಆಕ್ಸ್‌ಫರ್ಡ್) ಎಂದೆ ಪ್ರಖ್ಯಾತವಾದ ಕರ್ನಾಟಕ ಕಾಲೇಜು ಧಾರವಾಡದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಮಲೆನಾಡಿನ ಹಸಿರಿನ ಸೌಂದರ್ಯದ ಸೊಬಗನ್ನು ಸುತ್ತಲು ಹೊಂದಿರುವ ಈ ಕರ್ನಾಟಕ ಕಾಲೇಜು ನೋಡುಗರ ಮನಸ್ಸನ್ನು ತನ್ನತ್ತ ಸೆಳೆಯುತ್ತದೆ.

ಸಾಹಿತ್ಯ, ಸಂಗೀತ, ಸಂಸ್ಕೃತಿ, ಕ್ರೀಡೆ, ಓದು – ಬರಹ, ಪರಂಪರೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಕರ್ನಾಟಕ ಕಾಲೇಜು ಕೊಡುಗೆ ನೀಡಿದೆ. ಇಲ್ಲಿಯೇ ವಿದ್ಯಾಭ್ಯಾಸ ಮಾಡಿದ ಡಾ. ವಿ. ಕೃ. ಗೋಕಾಕ, ಗಿರೀಶ್ ಕಾರ್ನಾಡ್ ಹಾಗೂ ಡಾ. ಚಂದ್ರಶೇಖರ ಕಂಬಾರ ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿದ್ದು ನಮಗೆ ಹೆಮ್ಮೆಯ ಸಂಗತಿ. ಕರ್ನಾಟಕ ಕಾಲೇಜಿಗೆ ಇದೊಂದು ಅಪರೂಪದ ವಿಶೇಷತೆಯಾಗಿದೆ. ನಿಸರ್ಗದ ತೊಟ್ಟಿಲಲ್ಲಿರುವ ಭವ್ಯವಾದ ಗೋಥಿಕ್ ಶೈಲಿಯ ಕೆಂಪು ಕಟ್ಟಡ ಕರ್ನಾಟಕದ ಮೂಲೆ ಮೂಲೆಯಲ್ಲಿರುವ ಪ್ರತಿಭಾ ವಂತ ವಿದ್ಯಾರ್ಥಿಗಳನ್ನು ಸ್ವಾಗತಿಸುತ್ತಿದೆ. ಈ ಕೆಂಪು ಕಟ್ಟಡದಲ್ಲಿ ಓಡಾಡಿದ ನಾಡೋಜ ಡಾ. ಪಾಟೀಲ್ ಪುಟ್ಟಪ್ಪ, ನಾಡೋಜ ಡಾ. ಚನ್ನವೀರ ಕಣವಿ, ಡಾ. ವಿ. ಕೃ. ಗೋಕಾಕರು, ಕಾರ್ನಾಡ್, ಪ್ರೊ. ಚಂದ್ರಶೇಖರ ಪಾಟೀಲ್ (ಚಂಪಾ) ಶ್ರೇಷ್ಠ ಕವಿ, ನಾಟಕಕಾರರಿಗೆ ಸ್ಫೂರ್ತಿಯಾಗಿದೆ.

ಕರ್ನಾಟಕ ಕಾಲೇಜು ಎಂದರೆ ತಟ್ಟನೆ ನೆನಪಾಗುವುದು ಸುಂದರವಾದ ಕೆಂಪು ಕಟ್ಟಡ ಹಾಗೂ ಸುತ್ತಮುತ್ತಲಿನ ಹಚ್ಚಹಸಿರಿನಿಂದ ಕಂಗೊಳಿಸುತ್ತಿರುವ ಪರಿಸರ ಧಾರವಾಡ ಎಂಬ ಹೆಸರಿನಲ್ಲಿ ಏನೋ ಒಂಥರಾ ಮೈ ಜುಮ್ ಎನ್ನಿಸುವ ಶಕ್ತಿಇದೆ. ಧಾರವಾಡ ನಮಗೆ ದಾರಿ ತೋರಿಸುತ್ತದೆ. ಕರ್ನಾಟಕ ಕಾಲೇಜು ನಮಗೆ ಬದುಕಲು ಕಲಿಸುತ್ತದೆ.

"ಅಚ್ಚು ಕೆಂಪನೆಯ ಮಡಿಯತೊಟ್ಟು
ಹಸಿರು ವರ್ಣದ ದ್ವಾರವನಿಟ್ಟು
ಅಜ್ಞಾನದ ಸುಧೆಯನ್ನು ಮನದಲಿ ಮೆಟ್ಟು,
ಅಮ್ಮಾ ಕರ್ನಾಟಕ ಮಹಾವಿದ್ಯಾ ಲಯ ಮಾತೆಯೇ ನಿನ್ನ ಒಡಲೊಳಾಡುವ ನಾನೇ ಧನ್ಯ!"

"ಗೋಕಾಕ್, ಕಾರ್ನಾಡ್ ಹಾಗೂ ಕಂಬಾರರಿಗೆ ಜನ್ಮದ ಧಾರೆ ಎರೆದು ಬಿಟ್ಟೆ.
ಗತವೈಭವಭರಿತ ಜ್ಞಾನಪೀಠದ ಕಳಸವ ತೊಟ್ಟು
ಕಣವಿ, ಅಮೂರ ಹಾಗೂ ವೀಣಾ ಶಾಂತೇಶ್ವರರಿಗೆ ಮಡಿಲಲ್ಲಾಡುವ ಸೌಭಾಗ್ಯ ಕೊಟ್ಟೆ
ಕನ್ನಡದ ಕಂಪನ್ನ ಶಿಖರದೆತ್ತರಕ್ಕೆ ಪಸರಿಸಲು ಬಿಟ್ಟೆ
ಮಹೋನ್ನತ ಕವಿಸಾಮಂತರು ಮೆಟ್ಟಿದ ಮಣ್ಣಿನ ಒಡಲೋಳಾಡುವ ನಾನೆ ಧನ್ಯ !"

ಕೆಂಪು ಕಟ್ಟಡದ ಕರ್ನಾಟಕ ಕಾಲೇಜನ್ನು ಕರ್ನಾಟಕ ವಿದ್ಯಾ ಮಾತೆಗೆ ಹೋಲಿಕೆ ಮಾಡಿ ನಾನಾ ರೀತಿಯಲ್ಲಿ ಹೊಗಳಿಕೆ ಮಾಡಲಾಗಿದೆ.

ಇದೊಂದು ಅಪರೂಪದ ವಿದ್ಯಾರ್ಜನೆಯ ತಾಣವಾಗಿದೆ, ಮುಂದೆ ಸಾಗುತ್ತಾ 36 ಮೆಟ್ಟಿಲ್ಲನ್ನೂ ಏರುತ್ತಾ ಹೋದರೆ ಒಂದೊಂದು ಮೆಟ್ಟಿಲುಗಳು ಒಬ್ಬೊಬ್ಬ ಸಾಧಕನ ಸಾಧನೆಯನ್ನು ಮನ ಮುಟ್ಟುವಂತೆ ನಮ್ಮನ್ನು ತಲೆಬಾಗುವಂತೆ ಮಾಡುತ್ತದೆ.

"ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ, ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು"

ಎಂಬ ಕವಿವಾಣಿಯನ್ನು ನೆನೆದು ವಿದ್ಯಾರ್ಥಿ ತಲೆ ಬಾಗದಿರಲಾರ. ಹೌದು, ಇದು ವಿದ್ಯಾಮಂದಿರ. ಸರಸ್ವತಿಯ ದೇಗುಲ,ರಾವ್ ಬಹದ್ದೂರ್ ಶ್ರೀನಿವಾಸರಾಯರು ಕನ್ನಡಾಪ್ತ ಮುನ್ನುಡಿ
ಅರ್ಟಾಲ್ ರುದ್ರಗೌಡರ ದೈವ ತೃಪ್ತ ಧರ್ಮ ಗುಡಿ
ಸರ್ ಸಿದ್ದಪ್ಪ ಕಂಬಳಿಯವರ ಕನಸಿನ ಕನ್ನಡಿ
ಪಾಟಲಿ ಪುಟ್ಟಪ್ಪನವರ ಬೆವರ ಹನಿಯ ಬೆನ್ನುಡಿ ಈ ನನ್ನ ಕೆ.ಸಿ.ಡಿ. ಹಿರಿಗರಿಮೆಯ ಗೌರವಾನ್ವಿತರು ಹಚ್ಚಿಟ್ಟ ಎಂದಿಗೂ ಆರದ ದೀಪವಿದು, ಕಠಿಣ ಪರಿಶ್ರಮದ ಫಲವಾಗಿದೆ.. ನನ್ನ ಬಾಳಿನ ಸ್ವರ್ಗ ಸುವರ್ಣಾರಮನೆಯಿದು ನನ್ನ ಕೆ.ಸಿ.ಡಿ. ಇದು.

ಈ ಗೋಥಿಕ ಶೈಲಿಯ ಕೆಂಪು ಕಟ್ಟಡದಲ್ಲಿ ಹೀಗೆ ಮುಂದೆ ಸಾಗುತ್ತಾ ಹೋದಂತೆ ಬ್ರಿಟಿಷರ ಕಾಲದಲ್ಲಿ ಒಂದೊಂದು ಕೋಣೆಯನ್ನು ಬೃಹತ್ ಆಕಾರದಲ್ಲಿ ನಿರ್ಮಿಸಿದ್ದು ಕಾಣುತ್ತದೆ. ಆ ಕೊನೆಗಳಲ್ಲಿ ನಾವು ಕುಳಿತುಕೊಳ್ಳುವ ಆಸನಗಳಲ್ಲಿ ಹಲವಾರು ವಿಶ್ವವಿಖ್ಯಾತ ಮಹನೀಯರು ಮತ್ತು ಹಿರಿಯ ಸಾಹಿತಿಗಳು ಕುಳಿತು, ಓಡಾಡಿದ್ದಾರೆ. ಇಂತಹ ಪುಣ್ಯ ಸ್ಥಳದಲ್ಲಿ ಕುಳಿತು ಕಲಿಯುವ ನಾವೇ ಪುಣ್ಯರು ಹಾಗೂ ಧನ್ಯವಂತರು.

ಪ್ರಾಚಾರ್ಯರ ಕೊಠಡಿ ಮೇಲೆ ಇರುವ ರೋಮನ್ ಶೈಲಿಯ ಗಡಿಯಾರದ ಗಂಟೆ ವಿದ್ಯಾರ್ಥಿಗಳಿಗೆ ಸದಾ ಬಡಿದೆಚ್ಚರಿಸುತ್ತಾ ಸಮಯದ ಪ್ರಜ್ಞೆಯನ್ನು ಸೂಚಿಸುವ ಮೂಲಕ ಕಾರ್ಯಮಗ್ನರಾಗಲು ತಿಳಿಸುತ್ತದೆ. ಈ ಕೆಂಪುಕೋಟೆಗೆ ಆ ರೋಮನ್ ಶೈಲಿಯ ಗಡಿಯಾರ ಹಣೆಯ ಮೇಲಿನ ಬಿಳಿ ಬಣ್ಣದ ಬೊಟ್ಟಿನಂತೆ ಶಾಂತಿ ಸಂಕೇತವಾದ ಗಮನ ಸೆಳೆಯುತ್ತದೆ. ಎಲ್ಲಾ ಕೋಣೆಗಳನ್ನು ಗಮನಿಸಿ ಪ್ರಾಚಾರ್ಯರ ಕೊಠಡಿಯಿಂದ ಕೆಳಗೆ ಇಳಿದು ಬರುವಾಗ ಅಲ್ಲೊಂದು ಫಲವನ್ನು ಹಿಡಿದು ಕುಳಿತ ಮಂಗನ ಪ್ರತಿಮೆ ಕಾಣಿಸುತ್ತದೆ. ಈ ಪ್ರತಿಮೆಯನ್ನು ಗಮನಿಸಿದರೆ ಇಲ್ಲಿ ಕಲಿಯಲು ಬಂದಾಗ ನಾವು ಮಂಗಗಳಂತೆ ಇರುತ್ತೇವೆ. ಆದ್ದರಿಂದ ಕೆ.ಸಿ.ಡಿ ಮಾತೆ ತನ್ನ ಮಕ್ಕಳು ಕಲಿತು ತೇರಳುವಾಗ ಮಂಗಗಳಂತೆ ಓಡಿ ಹೋಗದೆ ಸಿಂಹಗಳಂತೆ ಗರ್ಜಿಸುತ್ತಾ ಹೊರಹೊಮ್ಮಬೇಕೆಂದು ಹೋರಗಿನ ಬಲಭಾಗದಲ್ಲಿ ಹಾಗೂ ಎಡಭಾಗದಲ್ಲಿ ಇರುವ ಸಿಂಹಗಳು ಸುಚಿಸುತ್ತವೆ. ಕೆ ಸಿ ಡಿ ಮಾತೆ ತನ್ನ ಮಕ್ಕಳಿಗೆ ಜ್ಞಾನಾರ್ಜನೆಯನ್ನು ಮಾಡಿಸಿ ಸಮಾಜಕ್ಕೆ ಕೊಡುಗೆಯನ್ನಾಗಿ ನೀಡುತ್ತಾಳೆ. ಏಕೆಂದರೆ ಕೆಸಿಡಿಯಲ್ಲಿ ಬಿದ್ದವನು ಗೆದ್ದ, ಎದ್ದವನು ಗೆದ್ದ..!

"ಬದುಕು ಪಾವನಗೊಳಿಸಿದ ಜ್ಞಾನದಾಯಿಯೇ ಇರಲಿ ನಮ್ಮ ಮನದ ತುಂಬ ನಿನ್ನ ಮಧುರ ಬಿಂಬ"

**–ಲೇಖಕರು : ಸಂಜಯಕುಮಾರ ಯ. ಬಿರಾದಾರ, ಸರ್ವಮಂಗಳ ಧಾರವಾಡ.**

# ಕರು ಮತ್ತು ಕತ್ತೆ ಮರಿ



ಆಟವಾಡುತ್ತಿದ್ದ ಮಕ್ಕಳು ಕತ್ತೆಮರಿಯನ್ನು ಅಟ್ಟಾಡಿಸಿಕೊಂಡು ಹೋಗಿ ಕಲ್ಲಿನಿಂದ ಹೊಡೆಯುತ್ತಿದ್ದರು. ಅದೇ ಕರುವನ್ನು ಅಪ್ಪಿ ಮುದ್ದಾಡಿದರು. ಕತ್ತೆ ಮರಿಗೆ ಇದನ್ನು ಕಂಡು ಬೇಸರವಾಯಿತು.

ಕತ್ತೆಗಳ ಗುಂಪೊಂದನ್ನು ಹಳ್ಳಿಯ ಹುಡುಗರು ಕಲ್ಲು ಹೊಡೆಯುತ್ತ ಅಟ್ಟಿಸಿಕೊಂಡು ಹೋಗುತ್ತಿದ್ದರು. ಗುಂಪಿನಲ್ಲಿ ಒಂದು ಮರಿಕತ್ತೆ ಕೂಡ ಇತ್ತು. ಹೆದರುತ್ತ ಮರಿಕತ್ತೆ ಅತ್ತ-ಇತ್ತ ನೋಡುತ್ತ ಗಾಬರಿಯಿಂದ ಓಡುತ್ತಿತ್ತು. ಹುಡುಗರೂ ಅದರ ಹಿಂದೆ ಬಿದ್ದಿದ್ದರು. ಅಷ್ಟರಲ್ಲಿ ಒಂದು ಮುದ್ದು ಕರು ಛಂಗ್ ಎಂದು ನೆಗೆಯುತ್ತಾನಿ ಕಾಣಿಸಿಕೊಂಡಿತು. ''ಕರು ಎಷ್ಟು ಚೆನ್ನಾಗಿದೆ' ಎನ್ನುತ್ತ ಮಕ್ಕಳು ಅದರ ಹಿಂದೆ ಓಡಿ ಹಿಡಿದರು. ಕರುವನ್ನು ಮುದ್ದು ಮಾಡಿದರು. ಇದನ್ನೆಲ್ಲ ದೂರದಿಂದ ಕತ್ತೆಮರಿ ನೋಡುತ್ತಿತ್ತು.

ಸಂಜೆಯಾಗುತ್ತಿದ್ದಂತೆಯೇ ಕತ್ತೆಮರಿ ಕರುವಿದ್ದ ಕೊಟ್ಟಿಗೆಯ ಬಳಿಗೆ ಬಂದಿತು. ''ಕರುವೇ, ನೀನೇ ಅದೃಷ್ಟವಂತ. ನಿನ್ನನ್ನು ಎಲ್ಲರೂ ಮುದ್ದು ಮಾಡುತ್ತಾರೆ. ನನ್ನ ಅವಸ್ಥೆ ನೋಡು. ಯಾರೂ ನನ್ನನ್ನು ಇಷ್ಟಪಡುವುದಿಲ್ಲ. ಕಲ್ಲು ಹೊಡೆದು ಅಟ್ಟುತ್ತಾರೆ'. ಕರು, ಕತ್ತೆಮರಿಯ ಮಾತನ್ನು ಕೇಳಿ ಪಾಪ ಎನಿಸಿತು. ಕತ್ತೆಮರಿಗೆ ಏನಾದರೂ ಸಹಾಯ ಮಾಡಬೇಕೆಂದೆನಿಸಿತು. ಅಷ್ಟರೊಳಗೆ ಮನೆಯ ಯಜಮಾನ ಕಾಣಿಸಿಕೊಂಡ. ''ಅಯ್ಯೋ ಕತ್ತೆ ಮರಿ ಇಲ್ಲಿ ಸೇರಿಕೊಂಡಿದೆ. ಛೆ.. ಎನ್ನುತ್ತ ಕೈಗೆ ಸಿಕ್ಕ ಕೋಲಿನಿಂದ ಓಡಿಸಿದ. ಕಣ್ಣೀರು ತಂದು ಕೊಂಡು ಕತ್ತೆಮರಿ ಅಲ್ಲಿಂದ ಓಡಿಹೋಯಿತು.

ಮರುದಿನ ಕತ್ತೆಮರಿ ಒಂಟಿಯಾಗಿ ನದಿಯ ತೀರದಲ್ಲಿ ನಿಂತಿತ್ತು. ಅಲ್ಲಿಗೆ ಬಂದ ಕರುವನ್ನು ಕಂಡು ಕತ್ತೆಮರಿ, ''ನಾನು ಕತ್ತೆಯಾಗಿ ಹುಟ್ಟಬಾರದಿತ್ತು' ಎಂದಿತು. ''ವಿಶ್ವಾಸ ಕಳೆದುಕೊಳ್ಳ ಬೇಡ. ನಿನ್ನನ್ನು ಮುದ್ದು ಮಾಡುವಂತೆ ಮಾಡುವ ಉಪಾಯ ನನ್ನ ಬಳಿ ಇದೆ.' ಎಂದಿತು ಕರು. ''ಅದು ಹೇಗೆ ಸಾಧ್ಯ?' ಎಂದು ಕತ್ತೆಮರಿ ಅಚ್ಚರಿ ವ್ಯಕ್ತಪಡಿಸಿತು. ಕರು, ಕತ್ತೆಮರಿಯನ್ನು ಒಂದು ಜಾಗಕ್ಕೆ ಕರೆದೊಯ್ಯಿತು.

ಹೊಳೆಯ ದಡದಲ್ಲೇ ಎರಡೂ ನಡೆದವು. ಕತ್ತೆಮರಿ ದಾರಿಯುದ್ದಕ್ಕೂ ಕಾಗದ ಮತ್ತಿತರ ಹಾಳು ಮೂಳನ್ನು ತಿನ್ನುತ್ತಿತ್ತು. ಕರು ಹೇಳಿತು, ''ಗೆಳೆಯ ಮೊದಲು ನೀನು ಈ ಹೊಲಸು ತಿನ್ನುವುದನ್ನು ಬಿಡು. ಹೊಲಸು ತಿಂದರೆ ನಿನ್ನ ಬುದ್ಧಿ ಕೂಡ ಹೊಲಸಿನಂತಾಗುತ್ತದೆ. ಆರೋಗ್ಯಕರ ಪದಾರ್ಥಗಳನ್ನು ತಿನ್ನು. ಹಸಿರು ಎಲೆ ತಿನ್ನು. ಹಣ್ಣು ತಿನ್ನು ಎಂದಿತು. ಕತ್ತೆಮರಿಯ ಮೈಮೇಲೆ ಹೇನುಗಳು, ಹುಳ ಹುಪ್ಪಟೆಗಳು ಮನೆ ಮಾಡಿದ್ದವು. ಅದರಿಂದಾಗಿ ಗಾಯ ಬಹಳ ಬೇಗ ವಾಸಿಯಾಗದೆ ಉಳಿದಿರುತ್ತಿತ್ತು. ಅದನ್ನು ಗಮನಿಸಿದ ಕರು ''ಹೊಳೆಯಲ್ಲಿ ಮೊದಲು ಸ್ನಾನ ಮಾಡೋಣ ಬಾ' ಎಂದಿತು. ''ಸ್ನಾನ ಯಾಕೆ ನನಗೆ?' ಎಂದು ಅನುಮಾನಿಸಿತು ಕತ್ತೆಮರಿ. ''ದೇಹ ಶುದ್ಧವಾಗಿರಬೇಕು ಗೆಳೆಯ! ಆಗ ಮನಸ್ಸು ಕೂಡಾ ಉಲ್ಲಸಿತ ವಾಗಿರುತ್ತದೆ. ಒಳ್ಳೆಯ ಆಲೋಚನೆಗಳು ಬರುತ್ತವೆ.' ಎಂದು ಕರು ಹೇಳಿದಾಗ ಕತ್ತೆಮರಿ ನೀರಿಗಿಳಿಯಿತು.

ಅವೆರಡೂ ಬಹಳ ಹೊತ್ತಿನವರೆಗೆ ಸ್ನಾನ ಮಾಡಿದವು. ನಂತರ ಬಿಸಿಲಿನಲ್ಲಿ ಮೈ ಒಣಗಿಸಿಕೊಂಡವು. ಕತ್ತೆ ಮರಿಯ ದೇಹವು ಶುಚಿಯಾಯಿತು. ಹೇನುಗಳೆಲ್ಲ ನಿರ್ಮೂಲನಗೊಂಡವು. ''ಸ್ನಾನ ಮಾಡಿದ ಮಾತ್ರಕ್ಕೆ ಕತ್ತೆ ಮರಿ ಕರು ವಾಗಲು ಸಾಧ್ಯವಿಲ್ಲ'
ಎಂದಿತು ಕತ್ತೆ. ಆಗ ಕರು 'ಮೊದಲು ನಿನ್ನ ಮನಃಸ್ಥಿತಿಯನ್ನು ಬದಲಿಸು. ಯಾರು ಏನು ಹೇಳುತ್ತಾರೆ ನ್ನುವುದು ಮುಖ್ಯ ವಲ್ಲ. ನಿನ್ನಲ್ಲಿ ವಿಶ್ವಾಸ ವಿಡು.'

ಎಂದು ಧೈರ್ಯ ತುಂಬಿತು. ಹೀಗೆಯೇ ಕತ್ತೆ ಮರಿ ಮತ್ತು ಕರು ಒಳ್ಳೆಯ ಗೆಳೆಯರಾದವು. ಅವೆರಡೂ ಒಟ್ಟಿಗೆ ಆಟಪಾಠಗಳಲ್ಲಿ ತೊಡಗಿದವು.

ಅದೊಂದು ದಿನ. ಊರಿನ ಬಾಲಕರೆಲ್ಲ ಊರಿನ ಮೈದಾನದಲ್ಲಿ ಕ್ರಿಕೆಟ್ ಆಡುತ್ತಿ ದ್ದರು. ಅಲ್ಲಿಗೆ ಕರು ಮತ್ತು ಕತ್ತೆ ಮರಿ ಹುಲ್ಲು ಮೆಲ್ಲುತ್ತಾ ಬಂದಿತು. ಕರುವನ್ನು ಕಂಡು ಮಕ್ಕಳು ಮುದ್ದು ಮಾಡಿದರು. ಇನ್ನೇನು ತನ್ನನ್ನು ಕಲ್ಲು ಹಿಡಿದು ಓಡಿಸುತ್ತಾರೆ ಎಂದು ಕೊಂಡ ಕತ್ತೆ ಓಟಕ್ಕೆ ಸಿದ್ಧವಾಯಿತು. ಆದರೆ, ಮಕ್ಕಳು ಕತ್ತೆ ಮರಿಯನ್ನೂ ಆಲಿಂಗಿಸಿ ಕೊಂಡು ಮುದ್ದು ಮಾಡಿದರು. ಕರು ಮತ್ತು ಕತ್ತೆ ಎರಡೂ ಜೊತೆಗೆ ಇರುವುದನ್ನು ಕಂಡು ಮಕ್ಕಳು ಅಚ್ಚರಿಪಟ್ಟರು. ಮುದ್ದು ಕರುವಿನ ಜೊತೆ ಮರಿ ಕತ್ತೆಯೂ ಛಂಗ್ ಎಂದು ಕುಣಿಯುತ್ತ ದೂರ ದೂರ ಓಡಿತು. ಕರು ಮತ್ತು ಕತ್ತೆ ಮರಿಯ ಆಟವನ್ನು ಕಂಡು ಮಕ್ಕಳೆಲ್ಲ ಖುಷಿ ಯಿಂದ ''ಹೋ?' ಎಂದು ಕುಣಿದಾಡಿದರು.

**–ಮತ್ತೂರು ಸುಬ್ಬಣ್ಣ**

**ಆಕರ್ಷಕ ನೋಟದ, ಆಕ್ರಮಣಕಾರಿ ಸ್ವಭಾವ, ಶತ್ರುಗಳನ್ನು ಹಿಮ್ಮೆಟ್ಟಿಸುವಂತಹ ದುರ್ವಾಸನೆಯುಳ್ಳ, ಹೊಟ್ಟೆಬಾಕ ಮೀನು ಟ್ರಿಗರ್ ಮೀನು. ಇಲ್ಲಿಯವರೆಗೂ ಗುರುತಿಸಲಾಗಿರುವ ಅಪರೂಪದ ಮೀನುಗಳಲ್ಲಿ ಇದೂ ಸೇರಿದ್ದು, 40ಕ್ಕೂ ಹೆಚ್ಚು ಪ್ರಭೇದಗಳಿವೆ.**



# ಹೊಟ್ಟೆಬಾಕ ಟ್ರಿಗರ್ ಮೀನು

ಜಲಚರಗಳೊಂದಿಗೆ ಆಕ್ರಮಣಕಾರಿ ಸ್ವಭಾವ ತೋರಿದರೂ ಮಾನವನ ಬಾಯಿ ಚಪಲಕ್ಕೆ ಈ ಮೀನುಗಳು ಹೆಚ್ಚಿನ ಪ್ರಮಾಣದಲ್ಲಿ ಬಲಿಯಾಗುತ್ತಿವೆ. ಆಹಾರಕ್ಕಾಗಿ ಬೇಟೆಯಾಡುವ ಕಾರಣ ಟ್ರಿಗರ್ ಮೀನುಗಳು ಅಳಿವಿನಂಚಿಗೆ ಸಾಗುತ್ತಿವೆ.

ನೋಡಲು ಆಕರ್ಷಕವಾಗಿದ್ದರೂ ಇದರ ದೇಹದಿಂದ ದುರ್ವಾಸನೆ ಹೊರ ಹೊಮ್ಮುತ್ತದೆ. ದೇಹದ ಹೊರ ಭಾಗ ಹಳದಿ, ನೀಲಿ, ಬಿಳಿ ಮತ್ತು ಕಂದು ಸೇರಿ ದಂತೆ ವಿವಿಧ ಬಣ್ಣಗಳಿಂದ ಕೂಡಿರುತ್ತದೆ. ಬೆನ್ನಿನ ಭಾಗದ ರಚನೆ ವಿಶಿಷ್ಟವಾಗಿದೆ. ದವಡೆ ಸೇರಿದಂತೆ ಎಲ್ಲಾ ಹಲ್ಲುಗಳು ಚೂಪಾಗಿರುತ್ತವೆ.

ಮೆಕ್ಸಿಕೊ, ಚಿಲಿ, ಪೆಸಿಫಿಕ್ ಸಮುದ್ರ, ಹವಾಯಿ, ಅರೆಬಿಯನ್ ಸಮುದ್ರ ಮತ್ತು ದಕ್ಷಿಣ ಜಪಾನ್, ಆಸ್ಟ್ರೇಲಿಯ ಸುತ್ತಮುತ್ತಲಿನ ಸಮುದ್ರಗಳಲ್ಲಿ ಇವು ಕಂಡು ಬರುತ್ತವೆ. ಹವಾಯಿ ದ್ವೀಪದ ಮೀನು ಎಂದೂ ಕರೆಯಲಾಗುತ್ತದೆ.

ಜೀವನಕ್ರಮ ಮತ್ತು ವರ್ತನೆ

ಇದು ಅತ್ಯುತ್ತಮವಾಗಿ ಈಜುವ ಸಾಮರ್ಥ್ಯ ಹೊಂದಿದ್ದು, ತನ್ನ ರೆಕ್ಕೆಗಳನ್ನು ಬಳಸಿಕೊಂಡು ಅಗತ್ಯಕ್ಕೆ ಅನುಗುಣವಾಗಿ ಹಿಂದಕ್ಕೆ ಮತ್ತು ಮುಂದಕ್ಕೆ ಚಲಿಸುವ ಸಾಮರ್ಥ್ಯ ಹೊಂದಿವೆ. ತನ್ನ ಪ್ರಭೇದದ ಮೀನುಗಳನ್ನು ಹೊರತುಪಡಿಸಿ ಉಳಿದ ಪ್ರಭೇದದ ಮೀನಿನ ಜೊತೆಗೆ ಇದು ಗುರುತಿಸಿಕೊಳ್ಳುವುದಿಲ್ಲ.

ಒಂಟಿಯಾಗಿರಲು ಹೆಚ್ಚು ಉತ್ಸಾಹ ತೋರಿಸುವ ಈ ಮೀನು ಅಡಗಿ ಕುಳಿತು ಬೇಟೆಯಾಡುವ ಜಾಣ್ಮೆ ತೋರಿಸುತ್ತದೆ. ಅಷ್ಟೇ ಅಲ್ಲದೇ, ಪರಭಕ್ಷಕಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಸಮುದ್ರದ ತಟದಲ್ಲಿ ರಂಧ್ರಗಳನ್ನು ಕೊರೆದುಕೊಂಡು ಅವಿತು ಕೂಳಿತು ಕೊಳ್ಳುತ್ತದೆ.

ಒಂದು ವೇಳೆ ಇತರ ಮತ್ಸ್ಯಗಳು ದಾಳಿ ಮಾಡಲು ಬಂದಾಗ ಅವು ಗಳನ್ನು ರಕ್ಷಣೆಗೆ ಪ್ರತಿದಾಳಿ ಮಾಡು ತ್ತದೆ. ಅಲ್ಲದೆ ತನ್ನ ಗುಂಪಿನ ಇತರ ಮೀನುಗಳಿಗೆ ಅಪಾಯದ ಮುನ್ಸೂಚನೆ ನೀಡಲು ಕರ್ಕಶ ಶಬ್ದ ಉಂಟು ಮಾಡುತ್ತದೆ. ಈ ಮೀನುಗಳು ಮಿಶ್ರಹಾರಿ ಗಳು. ಏಡಿ, ಸಣ್ಣ ಮೀನು, ಪಾಚಿ, ಸಿಗಡಿ, ಗಡುಸಾದ ಚರ್ಮದ ಮೀನುಗಳನ್ನು ಸೇವಿಸುತ್ತವೆ. ದಿನದ ಸಮಯ ದಲ್ಲಿ ಹೆಚ್ಚಿನ ಆಹಾರವನ್ನು ಸೇವಿಸು ತ್ತಲೇ ಇರುವುದು ಮತ್ತೊಂದು ವಿಶೇಷ.

ಸಂತಾನೋತ್ಪತ್ತಿ ಮೊಟ್ಟೆಗಳನ್ನು ಇಡುವಾಗ ತಾವಿರುವ ಸ್ಥಳದಿಂದ ದೂರ ಹೋಗಿ, ಸಮುದ್ರದ ಆಳದ ತಟದಲ್ಲಿ ಮೊಟ್ಟೆಗಳನ್ನು ಇಡುತ್ತದೆ. ಒಮ್ಮೆಗೆ ನೂರರಿಂದ ಸಾವಿರ ಮೊಟ್ಟೆಗಳನ್ನಿಡುತ್ತದೆ. ಎಲ್ಲ ಮೊಟ್ಟೆಗಳನ್ನು ತಾಯಿ ಮೀನು ಜೋಪಾನ ಮಾಡುತ್ತದೆ ಯಾದರೂ ಅದರಲ್ಲಿ ಮೂರನೇ ಒಂದು ಭಾಗ ನಾಶವಾಗುತ್ತದೆ.

ಆದರೆ ಮರಿಗಳಿಗೆ ಆಮ್ಲಜನಕ ಸರಿಯಾದ ಪ್ರಮಾಣದಲ್ಲಿ ಸಿಗುವಂತೆ ಮಾಡಲು ತಾಯಿ ಮೀನು ಸಮುದ್ರದ ದೊಡ್ಡ ಅಲೆಗಳಿಂದ ಮರಿಗಳನ್ನು ರಕ್ಷಿಸಿಕೊಂಡು ಓಡಾಡುತ್ತದೆ.

**ಧೂಮಪಾನ, ಮದ್ಯಪಾನ, ಮಾದಕವಸ್ತುಗಳು ಮಾನವರಲ್ಲಿ ಸೃಷ್ಟಿಸುವ ವ್ಯಸನದ ಕುರಿತು ಅದಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಇದೀಗ ಇದೇ ರೀತಿಯಲ್ಲಿ ವಿಡಿಯೋ ಗೇಮ್ ಮತ್ತು ಆನ್‌ಲೈನ್ ಗೇಮ್‌ಗಳು ಸಹ ಅಧ್ಯಯನಕ್ಕೆ ಒಳಪಡುತ್ತಿವೆ ಎಂದು ಹೇಳಬಹುದು.ಇತ್ತೀಚೆಗೆ ವಿಡಿಯೋ ಗೇಮ್ ಮತ್ತು ಆನ್‌ಲೈನ್ ಗೇಮ್‌ಗಳು ಮಾದಕವಸ್ತುಗಳಷ್ಟೇ ವ್ಯಸನವಾಗಿ ಬದಲಾಗುತ್ತಿದೆ ಎಂದು ಹಲವು ಮನೋವೈಜ್ಞಾನಿಕ ಅಧ್ಯಯನಗಳು ಪುರಾವೆ ಸಹಿತ ಋಜುವಾತು ಮಾಡಿರುವುದರಿಂದ ನಿಮ್ಮ ಮಕ್ಕಳ ಮೇಲೆ ನೀವು ಸಾಕಷ್ಟು ನಿಗಾವಹಿಸಲೇಬೇಕಿದೆ.**



# ಆನ್‌ಲೈನ್ ಗೇಮ್ ವ್ಯಸನ

ಇತ್ತೀಚಿಗೆ ವಿಡಿಯೋ ಗೇಮ್‌ಗಳ ವ್ಯಸನ ಅಂಟಿಸಿಕೊಂಡವರು ಮನೋವೈದ್ಯರ ಸಲ... ಪಡೆಯುವ ಪ್ರಕ್ರಿಯೆಯು ಇಂದು ಸಾಮಾನ್ಯ ಎನಿಸಿದೆ. ಆದರೆ, ಬಹುತೇಕ ಪೋಷಕರಿಗೆ ತಮ್ಮ ಮಕ್ಕಳು ಕ್ರಮೇಣ ವಿಡಿಯೋಗೇಮ್ ಗೀಳಿಗೆ ಒಳಗಾಗುತ್ತಿ ರುವ ವಿಚಾರದ ಗಂಭಿರತೆಯ ಅರಿವಿಲ್ಲ ಎಂದು ಮಾನಸಿಕ ತಜ್ಞರು ಹೇಳಿದ್ದಾರೆ.

ಸ್ಮಾರ್ಟ್ ಫೋನ್‌ಗಳು ಈಗ ಎಲ್ಲವನ್ನು ಆಕ್ರಮಿಸಿಕೊಂಡಿರುವುದು ನಿಜವಾದರೂ, ವಿಡಿಯೋ ಗೇಮ್ ಮತ್ತು ಆನ್‌ಲೈನ್ ಗೇಮ್‌ಗಳು ಮಾತ್ರ ಯುವಕರಲ್ಲಿ ಹೆಚ್ಚು ಗೀಳು/ಚಟವಾಗಿ ಬದಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಹೌದು, ಯುವಕರಲ್ಲಿ ವಿಡಿಯೋ ಗೇಮ್ ಸಾಕಷ್ಟು ದುಷ್ಪರಿಣಾಮಗಳನ್ನು ಉಂಟು ಮಾಡುತ್ತಿರುವುದನ್ನು ಮನೋತಜ್ಞರು ಗುರುತಿಸಿದ್ದು, ಯುವಕರ ಮನಸ್ಸು ಸದಾಕಾಲ ಆಟದಲ್ಲಿ ಮಗ್ನವಾಗಿ ಇರುವುದರಿಂದ ಚಂಚಲತೆ ಮೂಡಿಬಂದು ಅಧ್ಯಯನ ಮತ್ತು ಇತರ ಚಟುವಟಿಕೆಗಳ ಕುರಿತು ಅವರ ಆಸಕ್ತಿ ಕಡಿಮೆ ಯಾಗಿರುವುದರಿಂದ ಅಪಾರ ಹಾನಿ ಉಂಟಾಗುತ್ತದೆ. ಗೇಮ್‌ಗಾಗಿ ಗಂಟೆಗಟ್ಟಲೇ ಸ್ಕ್ರೀನ್ ನೋಡುವುದರಿಂದ ನಿದ್ರಾಹಾನಿ ಉಂಟಾಗಿ ಅದು ನಂತರ ದಿನಗಳಲ್ಲಿ ಇತರ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ ಎಂದು ಹೇಳಿದ್ದಾರೆ.

ಹಲವು ಅಧ್ಯಯನಗಳ ಪ್ರಕಾರ, ಇಂದಿನ ಯುವಕರು ಅಪಾರ ಮೊತ್ತದ ಹಣವನ್ನು ವಿಡಿಯೋಗೇಮ್‌ಗಳಿಗೆ ಮಾಡುತ್ತಿ ದ್ದಾರೆ. ಇದಕ್ಕೆ ಕಾರಣ ಅದರಲ್ಲಿರುವ ಅಡಿಕ್ಷನ್ ಗುಣವಾಗಿ ರುತ್ತದೆ. ಏಕೆಂದರೆ, ಹಲವು ವಿಡಿಯೋ ಗೇಮ್‌ಗಳು ಉಚಿತ ಎಂದು ಬಿಡುಗಡೆಯಾಗುತ್ತವೆ. ಆರಂಭದಲ್ಲಿ ಉಚಿತವಾಗಿ ಸಿಗುವ ಇಂತಹ ಆಟಗಳನ್ನು ಆಡುವ ಯುವಕರು ಕ್ರಮೇಣ ಅದರಲ್ಲಿರುವ ಮತ್ತು ಹೊಸ ಹೊಸ ಫೀಚರ್‌ಗಳನ್ನು ಹಣ ಕೊಟ್ಟು ಖರೀದಿಸಬೇಕಾಗುತ್ತದೆ. ಈಗಾಗಲೇ ಗೇಮ್‌ಗೆ ಅಡಿಕ್ಷನ್ ಆಗಿರುವ ಆ ವ್ಯಕ್ತಿ ಹಣ ಪಾವತಿಗೆ ಮಾನಸಿಕವಾಗಿ ಸಿದ್ಧನಾಗುತ್ತಾನೆ.

ಇದೇ ರೀತಿಯಲ್ಲಿ ನಾವು ಯುವಕನೋರ್ವನ ವಿಡಿಯೋ ಗೇಮ್ ಅಡಿಕ್ಷನ್ ಅನ್ನು ಸಾಮಾನ್ಯವಾಗಿ ಗುರುತಿಸಬಹುದು. ಆದರೆ, ಆತ ವಿಡಿಯೋ ಗೇಮ್ ಗಳಿಗೆ ಎಷ್ಟು ಅಡಿಕ್ಟ್ ಆಗಿದ್ದಾನೆ ಎಂಬುದನ್ನು ಮಾತ್ರ ತಿಳಿಯಲು ಆತನ ಜೊತೆ ನಾವು ಸಮಾಲೋಚನೆ ನಡೆಸಬೇಕಾಗುತ್ತದೆ.



ಮನಸ್ಸು ಸದಾಕಾಲ ಆಟದಲ್ಲಿ ಮಗ್ನವಾಗಿ ಇರುವುದರಿಂದ ಆತನ ಮನದಲ್ಲಿ ಚಂಚಲತೆ ಮೂಡಿರುತ್ತದೆ. ಇಂತಹ ಸಮಸ್ಯೆಯನ್ನು ಪೋಷಕರು ನಿವಾರಣೆ ಮಾಡಲು ಸಾಧ್ಯವಿಲ್ಲ. ಹಾಗಾಗಿ, ಇದು ಕೂಡ ಒಂದು ದೊಡ್ಡ ಸಮಸ್ಯೆ ಎಂದು ಮಾನಸಿಕ ತಜ್ಞರೋರ್ವರು ಹೇಳಿದ್ದಾರೆ. ಧೂಮಪಾನ, ಮದ್ಯಪಾನ, ಮಾದಕವಸ್ತುಗಳು ಮಾನವರಲ್ಲಿ ಸೃಷ್ಟಿಸುವ ವ್ಯಸನದ ಕುರಿತು ಅದಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. ಇದೀಗ ಇದೇ ರೀತಿಯಲ್ಲಿ ವಿಡಿಯೋ ಗೇಮ್ ಮತ್ತು ಆನ್‌ಲೈನ್ ಗೇಮ್‌ಗಳು ಸಹ ಅಧ್ಯಯನಕ್ಕೆ ಒಳಪಡುತ್ತಿವೆ ಎಂದು ಹೇಳಬಹುದು.

ಇತ್ತೀಚಿಗೆ ವಿಡಿಯೋ ಗೇಮ್ ಮತ್ತು ಆನ್‌ಲೈನ್ ಗೇಮ್‌ಗಳು ಮಾದಕವಸ್ತುಗಳಷ್ಟೇ ವ್ಯಸನವಾಗಿ ಬದಲಾಗುತ್ತಿದೆ ಎಂದು ಹಲವು ಮನೋ ವೈಜ್ಞಾನಿಕ ಅಧ್ಯಯನಗಳು ಪುರಾವೆ ಸಹಿತ ಋಜುವಾತು ಮಾಡಿರುವುದರಿಂದ ನಿಮ್ಮ ಮಕ್ಕಳ ಮೇಲೆ ನೀವು ಸಾಕಷ್ಟು ನಿಗಾವಹಿಸಲೇಬೇಕಿದೆ.

# ದೇಶ ಸದೃಢವಾಗಲು ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು

## ಸಮವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಹುಸೇನ್ ಸರಕಾವಸ್



ಸೊರಬ: ದೇಶ ಸದೃಢವಾಗಲು ಪ್ರತಿಯೊಂದು ಮಗುವು ಶಿಕ್ಷಣ ಪಡೆಯಬೇಕು. ಯಾವುದೇ ಮಗು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಸರ್ಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಕಾಯ್ದೆಯನ್ನು ಜಾರಿಗೆ ತಂದಿದೆ ಎಂದು ತಹಶೀಲ್ದಾರ್ ಹುಸೇನ್ ಸರಕಾವಸ್ ಹೇಳಿದರು.

ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆಯಲ್ಲಿ ಹಮ್ಮಿಕೊಂಡ 2023-24ನೇ ಸಾಲಿನ ಶೈಕ್ಷಣಿಕ ಪ್ರಾರಂಭೋತ್ಸವ ಮತ್ತು ಉಚಿತ ಪುಸ್ತಕ ಹಾಗೂ ಸಮವಸ್ತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕುವೆಂಪು ಅವರು ನುಡಿದಂತೆ ಪ್ರತಿಯೊಬ್ಬ ಮಗುವು ಜನಿಸುವಾಗ ವಿಶ್ವ ಮಾನವನಾಗಿ ಜನಿಸುತ್ತದೆ. ಆದರೆ, ಸಮಾಜ ಆ ಮಗುವನ್ನು ಅಲ್ಪ ಮಾನವನ್ನಾಗಿ ಮಾಡುತ್ತದೆ. ಆದರೆ, ಶಿಕ್ಷಣದಿಂದ ಮಾತ್ರ ಪುನಃ ವಿಶ್ವ ಮಾನವನಾಗಲು ಸಾಧ್ಯವಿದೆ. ಜಗತ್ತಿನಲ್ಲಿ ಅತ್ಯಂತ ಶಕ್ತಿಶಾಲಿಯಾದ ಆಯುಧವೆಂದರೆ ಅದು ಶಿಕ್ಷಣ ಮಾತ್ರ. ಪೋಷಕರು ತಮ್ಮ ವೈಯುಕ್ತಿಕ ಸಮಸ್ಯೆಗಳಿದ್ದರೆ ಅವುಗಳನ್ನು ಬದಿಗೊತ್ತಿ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು. ಸರ್ಕಾರದಿಂದ ಮಕ್ಕಳಿಗೆ ಉಚಿತ ಶಿಕ್ಷಣಕ್ಕಾಗಿ ಹಲವು ಸೌಲಭ್ಯಗಳನ್ನು ಕಲ್ಪಿಸಿದ್ದು, ಸರ್ಕಾರಿ ಶಾಲೆಗಳಲ್ಲಿ ನುರಿತ ಶಿಕ್ಷಕರಿದ್ದಾರೆ. ಇದರ ಪ್ರಯೋಜನ ಪಡೆದು ಮಕ್ಕಳನ್ನು ಉತ್ತಮ ಪ್ರಜೆಗಳಾಗಿ ರೂಪಿಸುವ ಜವಾಬ್ದಾರಿ ಪೋಷಕರ ಮೇಲಿದೆ ಎಂದರು.

ಮಕ್ಕಳಿಗೆ ಉಚಿತವಾಗಿ ನೋಟ್ ಪುಸ್ತಕ ಮತ್ತು ಲೇಖನಿ ವಿತರಿಸಿದ ಸಮಾಜ ಸೇವಕ ಡಾ. ಎಚ್.ಇ. ಜ್ಞಾನೇಶ್ ಮಾತನಾಡಿ, ಜಗತ್ತಿನಲ್ಲಿ ವ್ಯಕ್ತಿಯ ಏಳಿಗೆ ಶಿಕ್ಷಣ ಮತ್ತು ಕಲಿಕೆಯಿಂದ ಮಾತ್ರ ಸಾಧ್ಯವಿದೆ. ಭವಿಷ್ಯದ ಪ್ರಜೆಗಳ ರೂಪಿಸುವಲ್ಲಿ ಪ್ರಾಥಮಿಕ ಶಿಕ್ಷಣ ಅತ್ಯಂತ ಮಹತ್ವಪೂರ್ಣವಾಗಿದೆ. ಆರಂಭದ ಶಿಕ್ಷಣ ನೀಡುವ ಶಿಕ್ಷಕರ ಪಾತ್ರ ಅತ್ಯಂತ ಶ್ಲಾಘನೀಯವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಪುಸ್ತಕಗಳ ಜೊತೆಗೆ ಅಂತರ್ಜಾಲ, ಕಂಪ್ಯೂಟರ್ ಬಳಕೆ ಸೇರಿದಂತೆ ಸಾಮಾನ್ಯ ಜ್ಞಾನವನ್ನು ಸಮಗ್ರವಾಗಿ ತಿಳಿದುಕೊಂಡಾಗ ಮಾತ್ರ ಪರಿಪೂರ್ಣ ಶಿಕ್ಷಿತರಾಗಬಹುದು ಎಂದರು.

ಪ್ರಭಾರ ಬಿಇಒ ದಯಾನಂದ ಕಲ್ಲೇರ್ ಮಾತನಾಡಿ, ತಾಲೂಕಿನಾದ್ಯಂತ ಎಲ್ಲಾ ಶಾಲೆಗಳಲ್ಲೂ ಶೈಕ್ಷಣಿಕ ವರ್ಷಾರಂಭವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಗುಣಾತ್ಮಕ ಶೈಕ್ಷಣಿಕ ಕಲಿಕಾ ವರ್ಷವೆಂದು ಇಲಾಖೆ ಘೋಷಣೆ ಮಾಡಿದೆ. ಪೋಷಕರ ನಿರೀಕ್ಷೆಯಂತೆ ಕಳೆದ ಬಾರಿಯ ಲೋಪದೋಷಗಳನ್ನು ಸರಿ ಪಡಿಸಿಕೊಂಡು ತರಗತಿ ಆರಂಭದಂದೆ ಮಕ್ಕಳಿಗೆ ಶಿಕ್ಷಣ ನೀಡುವ ಗುರಿ ಹೊಂದಿರುವ ಜೊತೆಗೆ ಗುರುವಾರದಿಂದ ವೇಳಾಪಟ್ಟಿಗೆ ಅನುಗುಣವಾಗಿ ವಿಷಯವಾರು ಬೋಧನೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಶಿಕ್ಷಕರ ಕೊರತೆ ನೀಗಿಸಲು ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ಮಕ್ಕಳಿಗೆ ಶಿಕ್ಷಣಕ್ಕೆ ತೊಡಕಾಗದಂತೆ ಕ್ರಮ ವಹಿಸಲಾಗಿದೆ ಎಂದ ಅವರು, ಕ್ಷೇತ್ರದ ಶಾಸಕರಾದ ಎಸ್. ಮಧು ಬಂಗಾರಪ್ಪ ಅವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ರಾಜ್ಯವೇ ಸೊರಬದತ್ತ ನೋಡುವಂತೆ ಫಲಿತಾಂಶವನ್ನು ನೀಡಬೇಕಿದೆ. ಶಿಕ್ಷಕ ವರ್ಗವು ಸಹ ಕಠಿಣ ಶ್ರಮ ವಹಿಸಬೇಕು ಎಂದು ತಿಳಿಸಿದರು.

ಇದಕ್ಕೂ ಮೊದಲು ಮಕ್ಕಳನ್ನು ಪೂರ್ಣಕುಂಭ, ವಾದ್ಯ ಮೇಳದೊಂದಿಗೆ ಆರತಿ ಬೆಳಗಿಸಿ ಶಾಲೆಗೆ ಬರಮಾಡಿಕೊಳ್ಳಲಾಯಿತು. ಮಕ್ಕಳಿಗೆ ಸಿಹಿ ವಿತರಿಸಲಾಯಿತು.

ಎಸ್‌ಡಿಎಂಸಿ ಅಧ್ಯಕ್ಷ ರವಿ ಗುಡಿಗಾರ್ ಅಧ್ಯಕ್ಷತೆ ವಹಿಸಿದ್ದರು. ತಾಪಂ ಇಒ ನಾಗರಾಜ ಅನ್ವೇಕರ್, ತಾಲೂಕು ಆರೋಗ್ಯಾಧಿಕಾರಿ ಪ್ರಭು ಸಾಹುಕಾರ್, ಪುರಸಭೆ ಸದಸ್ಯೆ ಪ್ರೇಮಾ, ಇಸಿಒ ಸಂಜೀವ ಕುಮಾರ್, ಅರುಣ್ ಕುಮಾರ್, ಸಿಆರ್‌ಪಿ ಸುಧಾ, ಬಿಆರ್‌ಪಿ ಡಿ.ಸಿ. ರಾಘವೇಂದ್ರ, ಎಸ್‌ಡಿಎಂಸಿ ಸದಸ್ಯರಾದ ವಿಜಯಗೌಳಿ, ರವಿ ಕುಮಾರ್, ತ್ಯಾಗರಾಜ್, ಅನೋಕ, ಕಾವ್ಯಾ, ಗೌರಿ, ಆಶಾ, ಸುಜಾತಾ, ಶಿಕ್ಷಕರಾದ ಎಸ್.ಎಲ್. ಮುದಿಗೌಡ್ರು, ತುಳಸಾ ವಿ. ನಾಯಕ, ವಿದ್ಯಾ ರೇವಣಕರ, ಕವಿತಾ ಹಿರೇಕೇರಿ, ಎಂ. ಜ್ಯೋತಿ ಸೇರಿದಂತೆ ಇತರರಿದ್ದರು.

# ಗಾಜನೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಅರ್ಜಿ ಆಹ್ವಾನ

ಶಿವಮೊಗ್ಗ: ಕೈಗಾರಿಕೆ ತರಬೇತಿ ಮತ್ತು ಉದ್ಯೋಗ ಇಲಾಖೆಯ ಶಿವಮೊಗ್ಗ ತಾಲೂಕು ಗಾಜನೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ವಿವಿಧ ವೃತ್ತಿಗಳ ಪ್ರವೇಶಕ್ಕಾಗಿ ಮೆರಿಟ್ ಕಂ ರಿಸರ್ವೇಷನ್ ಆಧಾರಿತ ಸರ್ಕಾರಿ ಸೀಟುಗಳಿಗೆ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಂದ ಆನ್‌ಲೈನ್ /ಆಫ್‌ಲೈನ್ ಅರ್ಜಿ ಆಹ್ವಾನಿಸಿದೆ.

2 ವರ್ಷಗಳ ವೃತ್ತಿ ತರಬೇತಿಗಳಾದ ಕಂಪ್ಯೂಟರ್ ಆಪರೇಟರ್ ಮತ್ತು ಪ್ರೋಗ್ರಾಮಿಂಗ್ ಅಸಿಸ್ಟೆಂಟ್, ಎಲೆಕ್ಟ್ರೀಷಿಯನ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್, ಇನ್‌ಸ್ಟ್ರುಮೆಂಟ್ ಮೆಕ್ಯಾನಿಕ್, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್. ಫಿಟ್ಟರ್, ಅಡ್ವಾನ್ಸ್ ಸಿ.ಎನ್.ಸಿ., ಬೇಸಿಕ್ ಡಿಸೈನರ್ ಮತ್ತು ವರ್ಚುಯಲ್ ವೆರಿಫೈಯರ್ (ಮೆಕ್ಯಾನಿಕಲ್), ಇಂಡಸ್ಟ್ರೀಯಲ್ ರೋಬೋಟಿಕ್ಸ್ ಮತ್ತು ಡಿಜಿಟಲ್ ಮ್ಯಾನಿಫ್ಯಾಕ್ಚರಿಂಗ್ ಟೆಕ್ನಿಷಿಯನ್, ಆರ್ಟಿಸನ್ ಯೂಸಿಂಗ್ ಅಡ್ವಾನ್ಸ್ ಟೂಲ್, ಮ್ಯಾನ್ಯುಫ್ಯಾಕ್ಚರಿಂಗ್ ಪ್ರೋಸಸ್ ಕಂಟ್ರೋಲ್ ಮತ್ತು ಆಟೋಮಿಷನ್ ಕೋರ್ಸ್‌ಗಳಿಗೆ ಪ್ರವೇಶಗಳು ಲಭ್ಯವಿದೆ.

ಆಸಕ್ತರು ಗಾಜನೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ, ಆಧಾರ್‌ಕಾರ್ಡ್, 4 ಇತ್ತೀಚಿನ ಪಾಸ್‌ಪೋರ್ಟ್ ಭಾವಚಿತ್ರಗಳು, ಅಭ್ಯರ್ಥಿಗಳ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸಗಳೊಂದಿಗೆ ಭೇಟಿ ನೀಡಿ ಆನ್ ಲೈನ್/ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಂತೆ ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ.: 9448530349/ 9449775239.

# ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಶಿವಮೊಗ್ಗ : 2023-24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವತಿಯಿಂದ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ (ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ) ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರಕಾರದ ಕಾರ್ಯದರ್ಶಿ ತುಲಸಿ ಮದ್ದಿನೇನಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಇಲಾಖೆಗಳ ವಿದ್ಯಾರ್ಥಿನಿಲಯಗಳಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ತಮ್ಮ ಎಸ್‌ಎಟಿಎಸ್ ಐಡಿಯೊಂದಿಗೆ ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ವಿಳಾಸ https://shp.karnataka.gov.in/ ಇಲ್ಲಿ ಅರ್ಜಿ ಸಲ್ಲಿಸುವುದು. ಜೂ.15 ಅರ್ಜಿ ಸಲ್ಲಿಸಲು ಕೊನೆಯ ದಿನ ಆಗಿರುತ್ತದೆ.

ವಿಶೇಷ ಸೂಚನೆ: ವಿದ್ಯಾರ್ಥಿಗಳು 2023-24ನೇ ಸಾಲಿನಲ್ಲಿ ಬೇರೆ ಶಾಲೆಗಳಿಗೆ ಪ್ರವೇಶ ಪಡೆದಿದ್ದರೆ ಸದರಿ ವಿದ್ಯಾರ್ಥಿಗಳ ಎಸ್‌ಎಟಿಎಸ್ ಐಡಿಯನ್ನು ಪ್ರಸಕ್ತ ಶಾಲೆಯಲ್ಲಿ, ಸಂಬಂಧಿಸಿದ ಮಾಹಿತಿಯನ್ನು ಇಂಧಿಕರಿಸಿ ಅರ್ಜಿ ಸಲ್ಲಿಸಬೇಕು ಎಂದು ಅವರು ತಿಳಿಸಿದ್ದಾರೆ.

# ಪ್ರವೇಶಕ್ಕೆ ಅರ್ಜಿ ಆಹ್ವಾನ

ಶಿವಮೊಗ್ಗ: 2023-24ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಪ.ಜಾ/ಪ.ಪಂ.ದ ಹಾಗೂ 25% ರಷ್ಟು ಹಿಂದುಳಿದ ವರ್ಗಗಳ 5 ರಿಂದ 10ನೇ ತರಗತಿಯವರೆಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ವಿಳಾಸ https://shp.karnataka.gov.in ರಲ್ಲಿ ಅರ್ಜಿ ಸಲ್ಲಿಸುವಂತೆ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಕಚೇರಿಯನ್ನು ಖುದ್ದಾಗಿ ಅಥವಾ ದೂ.ಸಂ.: 08181-227628ನ್ನು ಸಂಪರ್ಕಿಸುವುದು.

# ವಧುವರರ ನೋಂದಣಿಗೆ ಆಹ್ವಾನ

ಶಿವಮೊಗ್ಗ: ಜಿಲ್ಲಾ ವಿಶ್ವಕರ್ಮ ಮಹಾಸಭಾ (ರಿ) ಶಿವಮೊಗ್ಗ ಇದರ ಆಶ್ರಯದಲ್ಲಿ ವಿಶ್ವಕರ್ಮ ಸಮಾಜದ ವಧು_ವರರ ಅನ್ವೇಷಣೆ ಮತ್ತು ನೋಂದಣಿ ಕಾರ್ಯಕ್ರರ್ಮವನ್ನು ಪ್ರತಿ ತಿಂಗಳ 2ನೇ ಶನಿವಾರ ಶ್ರೀ ಕಾಳಿಕಾ ಪರಮೇಶ್ವರಿ ದೇವಸ್ಥಾನದ ಕಾರ್ಯಾಲಯದಲ್ಲಿ ಬೆಳಗ್ಗೆ 11.00 ಗಂಟೆಯಿಂದ ಸಾಯಂಕಾಲ 4.00 ಗಂಟೆಯವರೆ ಹಮ್ಮಿಕೊಳ್ಳಲಾಗಿದೆ. ಆಸಕ್ತ ಸಮಾಜ ಬಂಧವರು ವಧು\ವರರ 2 ಭಾವಚಿತ್ರ ಮತ್ತು ಜಾತಕ ಇತ್ಯಾದಿ ವಿವರಗಳನ್ನೊಳಗೊಂಡ ಮಾಹಿತಿಯನ್ನು ಖುದ್ದು ಹಾಜರಾಗಿ ಸಂಯೋಕರಿಗೆ ಸಲ್ಲಿಸಲು ಕೋರಲಾಗಿದೆ.

# ಪಾಲಿಟೆಕ್ನಿಕ್ ಡಿಪ್ಲೋಮಾ ಕೋರ್ಸ್‌ಗಾಗಿ ಅರ್ಜಿ ಆಹ್ವಾನ

ಶಿವಮೊಗ್ಗ : ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕು ಬಾಳಗಡಿ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ 2023-24ನೇ ಸಾಲಿನಲ್ಲಿ ಆರಂಭಗೊಂಡಿರುವ ಫುಡ್ ಪ್ರೋಸೆಸಿಂಗ್ ಮತ್ತು ಪ್ರಿಸರ್ವೇಶನ್ ಇಂಜಿನಿಯರಿಂಗ್, ಟ್ರಾವೆಲ್ಸ್ ಮತ್ತು ಟೂರಿಸಂ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ./ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ನೇರವಾಗಿ ಸಂಸ್ಥೆಯಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ವೆಬ್‌ಸೈಟ್ https://dtek.karnataka.gov.in ಅಥವಾ ಪ್ರಾಚಾರ್ಯರ ಮೊ.ಸಂ.: 7975792426 ನ್ನು ಸಂಪರ್ಕಿಸುವಂತೆ ಕೊಪ್ಪ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚೆಸ್ ಕೋರ್ಸಿಗೆ ಅರ್ಜಿ ಆಹ್ವಾನ

ಶಿವಮೊಗ್ಗ: ನಳಂದ ಚೆಸ್ ಅಕಾಡೆಮಿ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಒಂದು ವರ್ಷದ ಚೆಸ್ ಕೋರ್ಸ್‌ನ್ನು ಜೂ. 10 ರಿಂದ ಮಾರ್ಚ್ 15 ರತನಕ ನಡೆಸಲಾಗುವುದು. ವಾರದಲ್ಲಿ ಎರಡು ದಿನ ಚೆಸ್ ತರಬೇತಿ ಇದ್ದು, ಆಟದ ರೀತಿಯಲ್ಲಿ ಪಂದ್ಯಾವಳಿಗಳನ್ನೂ ನಡೆಸಲಾಗುವುದು. ಆನ್ ಲೈನ್ ತರಗತಿಯೂ ಇರುತ್ತದೆ. ಆಸಕ್ತರು ವಿವರಕ್ಕೆ ಶ್ರೀಕೃಷ್ಣ ಉಡುಪ 9844436276 ಅಥವಾ ವಿನೋದ್ 9686791209 ಈ ನಂಬರಿಗೆ ಸಂಪರ್ಕಿಸಬಹುದು.

# ವಿಶ್ವ ಪರಿಸರ ದಿನದ ಅಂಗವಾಗಿ ಆನೆಬಿಡಾರದಲ್ಲಿ ಕಾರ್ಯಕ್ರಮಗಳು

ಶಿವಮೊಗ್ಗ: ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಮಿನಿಸ್ಟ್ರಿ ಆಫ್ ಟೂರಿಸಂ ಬೆಂಗಳೂರು ಇವರ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವವರಿಗೆ ಸಕ್ರೆಬೈಲು ಆನೆ ಬಿಡಾರದಲ್ಲಿ ದಿನಾಂಕ: 05-06-2023 ರ ಬೆಳಿಗ್ಗೆ 9 ಗಂಟೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಹೋಟೆಲ್ ಮಾಲೀಕರು, ಟ್ರಾವೆಲ್ಸ್ ಏಜೆನ್ಸಿ, ಹೋಮ್ ಸ್ಟೇ ಮಾಲೀಕರು, ಜಿಲ್ಲೆಯ ವಿವಿಧ ಪ್ರವಾಸೋದ್ಯಮ ಪಾಲುದಾರರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗೆ ಸೇರಿ ವಿಶ್ವ ಪರಿಸರ ದಿನಾಚರಣೆ, ಸ್ವಚ್ಛತಾ ಕಾರ್ಯಕ್ರಮ ಹಾಗೂ ವಿವಿಧ ಪರಿಸರ ಸಂರಕ್ಷಣಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ವಿಶ್ವ ತಂಬಾಕು ರಹಿತ ದಿನ

# ಯಾವ ಪ್ರಾಣಿಯೂ ತಿನ್ನದಂತಹ ವಸ್ತು ತಂಬಾಕು

ಶಿವಮೊಗ್ಗ : ಯಾವ ಪ್ರಾಣಿಯೂ ತಿನ್ನದಂತಹ ವಸ್ತು ತಂಬಾಕು. ಅಂತಹ ತಂಬಾಕನ್ನು ಮನುಷ್ಯರು ತಿನ್ನುತ್ತಿದ್ದೇವೆಂದರೆ ನಾವು ಪ್ರಾಣಿಗಳಿಗಿಂತಲೂ ಕೀಳು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡ ಅಭಿಪ್ರಾಯಪಟ್ಟರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸುಬ್ಬಯ್ಯ ವೈದ್ಯಕೀಯ ಮತ್ತು ದಂತ ವೈದ್ಯಕೀಯ & ನಸಿರ್ಂಗ್ ಕಾಲೇಜು, ಶರಾವತಿ ದಂತ ವೈದ್ಯಕೀಯ ಕಾಲೇಜು, ಜಿಲ್ಲಾ ಮೆಗ್ಗಾನ್ ಬೋಧನಾ ಆಸ್ಪತ್ರೆ, ಕಿ.ಮ.ಆ.ಸ ತರಬೇತಿ ಶಾಲೆ, ಜಿಲ್ಲಾ ವಕೀಲರ ಸಂಘ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಭಾರತೀಯ ವೈದ್ಯಕೀಯ ಸಂಘ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆಯ ಅಂಗವಾಗಿ ಇಂದು ಜಿಲ್ಲಾ ನ್ಯಾಯಾಲಯದ ಆವರಣದಿಂದ ಆಯೋಜಿಸಲಾಗಿದ್ದ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.




ತಂಬಾಕು ಸೇವನೆಯಿಂದಾಗುವ ತೊಂದರೆಯನ್ನು ತಡೆಗಟ್ಟುವುದು ಹಾಗೂ ಇದರ ದುಷ್ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಜೂಜು, ಹವ್ಯಾಸಗಳು ಬಹಳ ಕೆಟ್ಟದ್ದು. ನಾವು ಮೋಜಿಗಾಗಿ ಅದನ್ನು ತಿನ್ನುತ್ತೇವೆ. ಆದರೆ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮವೇ ಹೆಚ್ಚು. ಅಂದಾದ ಮೇಲೆ ಮನುಷ್ಯನ ಜೀವಕ್ಕೆ ಹಾನಿ ಉಂಟು ಮಾಡುವ ತಂಬಾಕು ಸೇವನೆಯನ್ನು ಪ್ರತಿಯೊಬ್ಬರು ತ್ಯಜಿಸಬೇಕೆಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಡಾ. ಸೆಲ್ವಮಣಿ.ಆರ್ ಮಾತನಾಡಿ, ತಂಬಾಕು ಮುಕ್ತ ಶಿವಮೊಗ್ಗ ಮಾಡಬೇಕು ಎಂಬ ನಿಟ್ಟಿನಲ್ಲಿ ಈ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಮಾಧ್ಯಮಗಳಲ್ಲಿ ಜಾಹೀರಾತುಗಳ ಮುಖಾಂತರ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ಆದರೂ ಕೂಡ ನಮ್ಮ ಸಮುದಾಯದಲ್ಲಿ ತಂಬಾಕು ಉಪಯೋಗ ಕಡಿಮೆ ಆಗಿಲ್ಲ. ತಂಬಾಕು ಸೇವನೆ ಕೇವಲ ಹಾನಿಕಾರಕ ಮಾತ್ರ, ಅದರಿಂದ ಯಾವುದೇ ಉಪಯೋಗವಿಲ್ಲ. ಹಾಗಾಗಿ ಈ ತಂಬಾಕು ಸೇವನೆ ಮತ್ತು ತಂಬಾಕು ಉಪಯೋಗದಿಂದ ಹೊರ ಬರಬೇಕು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ಮಾತನಾಡಿ, ಜಿಲ್ಲೆಯಾದ್ಯಂತ ಪ್ರತಿ ಪೊಲೀಸ್ ಠಾಣೆಯಲ್ಲಿ 100 ಕ್ಕೂ ಹೆಚ್ಚು ಕೋಟ್ಪಾ ಕೇಸ್‌ಗಳನ್ನು ಮಾಡಬೇಕು ಎಂದು ಈಗಾಗಲೇ ಆದೇಶ ಮಾಡಲಾಗಿದೆ. ಪಿಯುಸಿ ಮತ್ತು ಕಾಲೇಜ್ ಮಕ್ಕಳು ತಂಬಾಕಿನಿಂದ ದೂರ ಇರಬೇಕು. ಶಾಲಾ-ಕಾಲೇಜ್‌ಗಳ ಸುತ್ತಮುತ್ತ ಇರುವ ಪಾನ್ ಶಾಪ್, ಬೀಡಾ ಅಂಗಡಿ, ಟೀ ಅಂಗಡಿ ಇಂತಹ ಕಡೆ ಗಮನ ನೀಡಿ ಕೋಟ್ಪಾ ಕೇಸ್‌ಗಳನ್ನು ಹೆಚ್ಚು ದಾಖಲಿಸಬೇಕು ಎಂದು ತಿಳಿಸಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಬಿ.ಜಿ.ಶಿವಮೂರ್ತಿ ಮಾತನಾಡಿ, ತಂಬಾಕು ಉತ್ಪನ್ನದ ಮೇಲೆ ಹಾನಿಕಾರಕ ಎಂದು ಬರೆದಿದ್ದರೂ ಸಹ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಅದನ್ನು ಬೇರೆ ಬೇರೆ ವಿಧಗಳಲ್ಲಿ ಉಪಯೋಗಿಸುತ್ತಿರುವುದು ಒಳ್ಳೆಯದಲ್ಲ. ತಂಬಾಕು ಮುಕ್ತವನ್ನಾಗಿ ಮಾಡುವ ನಿಟ್ಟಿನಲ್ಲಿ ಈ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ ಸುರಗಿಹಳ್ಳಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಿ.ಎನ್ ಚಂದನ್, ಜಿ.ಪಂ ಸಿಇಒ ಸ್ನೇಹಲ್ ಸುಧಾಕರ್ ಲೋಖಂಡೆ, ನ್ಯಾಯಾಧೀಶರುಗಳು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಸಿದ್ದನಗೌಡ ಪಾಟೀಲ್, ವೈದ್ಯಕೀಯ ಅಧೀಕ್ಷಕರಾದ ಶ್ರೀಧರ್, ಆರೋಗ್ಯ ಇಲಾಖೆಯ ಕಾರ್ಯಕ್ರಮ ಅನು?ಾ?ಠನಾಧಿಕಾರಿಗಳು, ಇತರೆ ಅಧಿಕಾರಿ, ಸಿಬ್ಬಂದಿಗಳು ಹಾಜರಿದ್ದರು.

# ತಂಬಾಕು ನಿಷೇಧ ಕಾಯ್ದೆ: ಸಮರ್ಪಕವಾಗಿ ಅನುಷ್ಠಾನಗೊಳ್ಳಲಿ



ಸೊರಬ: ಸಮಾಜದಲ್ಲಿ ತಂಬಾಕು ನಿಯಂತ್ರಣಕ್ಕಾಗಿ ಕಾನೂನಿನಲ್ಲಿ ಕಾಯ್ದೆಗಳಿದ್ದು, ಅಧಿಕಾರಿಗಳು ಕಾಯ್ದೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಜೆಎಂಎಫ್ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಭಾಕರ ರಾವ್ ಹೇಳಿದರು.

ಪಟ್ಟಣದ ಸ್ತ್ರೀ ಶಕ್ತಿ ಭವನದಲ್ಲಿ ತಾಲೂಕು ಆಡಳಿತ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ಎಚ್‌ಪಿಆರ್ ನರ್ಸಿಂಗ್ ಕಾಲೇಜ್ ಸೇರಿದಂತೆ ವಿವಿಧ ಇಲಾಖೆಗಳ ಸಹಾಯೋಗದಲ್ಲಿ ಹಮ್ಮಿಕೊಂಡ ವಿಶ್ವ ತಂಬಾಕು ರಹಿತ ದಿನಾಚರಣೆ ಹಾಗೂ ಜಾಗೃತಿ ಜಾಥಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವನೆ ನಿಯಂತ್ರಿಸಲು ಸರ್ಕಾರ ತಾಲೂಕು ಮಟ್ಟದ ಅಧಿಕಾರಿಗಳಿಗೆ ಅಧಿಕಾರವನ್ನು ನೀಡಿದೆ. ಆದರೆ, ಈವರೆಗೂ ಅಧಿಕಾರಿಗಳು ಸಮರ್ಪಕವಾಗಿ ಹಾಗೂ ಪೂರ್ಣ ಪ್ರಮಾಣದಲ್ಲಿ ಕಾಯ್ದೆಯನ್ನು ಅನುಷ್ಠಾನಗೊಳಿಸಿಲ್ಲ. ಮುಂದಿನ ದಿನಗಳಲ್ಲಿ ಗ್ರಾಮೀಣ ಮಟ್ಟದಲ್ಲಿ ತಂಬಾಕು ನಿಯಂತ್ರಣಕ್ಕಾಗಿ ಗ್ರಾಪಂ ಪಿಡಿಒಗಳಿಗೆ ಜವಾಬ್ದಾರಿ ನೀಡುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಅವರು, ತಂಬಾಕಿನಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯ ಸರ್ಕಾರ ಮತ್ತು ಅಧಿಕಾರಿಗಳದ್ದು ಮಾತ್ರವಾಗಿರದೇ ಮಾಧ್ಯಮಗಳ ಪಾತ್ರವೂ ಅತಿ ಹೆಚ್ಚಿದೆ ಎಂದರು.

ಜೆಎಂಎಫ್‌ಸಿ ಸಿವಿಲ್ ನ್ಯಾಯಾಧೀಶ ಅಬ್ದುಲ್ ಸಲೀಂ ಮಾತನಾಡಿ, ಮೋಜಿಗಾಗಿ ಆರಂಭವಾಗುವ ದುಷ್ಚಟಗಳು ನಂತರದ ದಿನದಲ್ಲಿ ಜೀವಕ್ಕೆ ಕುತ್ತು ತರುತ್ತವೆ. ಈ ಸಾಲಿನಲ್ಲಿ ಮುಖ್ಯವಾಗಿ ತಂಬಾಕು ಸೇವನೆ ಸೇರಿದೆ. ಆಧುನಿಕ ಜೀವನ ಶೈಲಿಗೆ ಒಗ್ಗಿಕೊಳ್ಳುತ್ತಿರುವ ಯುವ ಜನತೆ ಸ್ತ್ರೀ-ಪುರುಷ ಎಂಬ ಬೇಧವಿಲ್ಲದೇ ತಂಬಾಕು ಸೇವನೆ ಮಾಡುತ್ತಿರುವುದನ್ನು ಕಾಣಬಹುದು. ಇದರಿಂದ ಭವಿಷ್ಯದಲ್ಲಿ ಗಂಡಾಂತರ ಎದುರಿಸಬೇಕಾಗುತ್ತದೆ. ಯುವ ಜನತೆ ದುಷ್ಚಟಗಳಿಗೆ ಬಲಿಯಾಗದೇ ಉತ್ತಮ ಪ್ರಜೆಗಳಾಗಬೇಕು ಜೊತೆಗೆ ತಂಬಾಕು ನಿಯಂತ್ರಣಕ್ಕೆ ಎಲ್ಲರೂ ಕೈ ಜೋಡಿಸಬೇಕು ಎಂದು ಕರೆ ನೀಡಿದರು.

ನಂತರ ಸ್ತ್ರೀ ಶಕ್ತಿ ಭವನದಿಂದ ಪಟ್ಟಣದ ಖಾಸಗಿ ಬಸ್ ನಿಲ್ದಾಣದವರೆಗೆ ಜಾಥಾ ಕಾರ್ಯಕ್ರಮ ನಡೆಸಲಾಯಿತು.

ತಹಸೀಲ್ದಾರ್ ಹುಸೇನ್ ಸರಕಾವಸ್, ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರಭು ಸಾಹುಕಾರ್, ಪ್ರಭಾರ ಬಿಇಒ ದಯಾನಂದ ಕಲ್ಲೇರ್, ಅಪರಾಧ ವಿಭಾಗದ ಪಿಎಸ್‌ಐ ಮಾಳಪ್ಪ ಚಿಪ್ಪಲಕಟ್ಟಿ, ಎಚ್‌ಪಿಆರ್ ನರ್ಸಿಂಗ್ ಕಾಲೇಜ್ ಪ್ರಾಂಶುಪಾಲ ಮಂಜುನಾಥ್, ತಾಪಂ ಸಹಾಯಕ ನಿರ್ದೇಶಕಿ ಸೀಮಾ, ಆರೋಗ್ಯ ಶಿಕ್ಷಣಾಧಿಕಾರಿ ಪದ್ಮಾವತಿ, ಹಿರಿಯ ಆರೋಗ್ಯ ಸಹಾಯಕಿ ಕುಸುಮಾ, ಯಶವಂತ್ ಶಾಮ್, ಶಬ್ಬೀರ್ ಖಾನ್, ಶಿಲ್ಪಾ, ಸೇರಿದಂತೆ ಆಶಾ ಕಾರ್ಯಕರ್ತೆಯರು ಮತ್ತು ಎಚ್‌ಪಿಆರ್ ನರ್ಸಿಂಗ್ ಕಾಲೇಜ್‌ನ ವಿದ್ಯಾರ್ಥಿಗಳು ಉಪಸ್ಥಿತರರಿದ್ದರು.

ಫೋಟೋ 31 ಸೊರಬ 01: ಸೊರಬ ಪಟ್ಟಣದ ಸ್ತ್ರೀ ಶಕ್ತಿ ಭವನದಲ್ಲಿ ಹಮ್ಮಿಕೊಂಡ ವಿಶ್ವ ತಂಬಾಕು ರಹಿತ ದಿನಾಚರಣೆ ಹಾಗೂ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಜೆಎಂಎಫ್ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಭಾಕರ ರಾವ್ ಉದ್ಘಾಟಿಸಿದರು.

## ಜಾತಿವಾರು ಸಮೀಕ್ಷೆಯ ವರದಿಯನ್ನು ಕೂಡಲೇ ಅಂಗೀಕರಿಸಿ

### ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಹಿಂದುಳಿದ ಜನಜಾಗೃತಿ ವೇದಿಕೆ ಆಗ್ರಹ

ಶಿವಮೊಗ್ಗ: ಹೆಚ್. ಕಾಂತರಾಜು ಅವರ ಆಯೋಗದ ನೇತೃತ್ವದಲ್ಲಿ ನಡೆದಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿವಾರು ಸಮೀಕ್ಷೆಯ ವರದಿಯನ್ನು ಈ ಕೂಡಲೇ ಅಂಗೀಕರಿಸಬೇಕು ಎಂದು ಜಿಲ್ಲಾ ಹಿಂದುಳಿದ ಜನಜಾಗೃತಿ ವೇದಿಕೆ ಆಗ್ರಹಿಸಿದೆ.

ಪ್ರೆಸ್‌ಟ್ರಸ್ಟಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ವೇದಿಕೆಯ ಅಧ್ಯಕ್ಷ ತೀ. ನ. ಶ್ರೀನಿವಾಸ, ವಿಧಾನಸಭೆ ಮತ್ತು ಲೋಕಸಭೆಯಲ್ಲಿಯೂ ಸಹ ಎಸ್ಸಿ/ಎಸ್ಟಿಗೆ ಮೀಸಲಿಟ್ಟಂತೆ ಹಿಂದುಳಿದ ವರ್ಗಗಳಿಗೂ ಜನಸಂಖ್ಯೆಗೆ ಅನು ಗುಣವಾಗಿ ರಾಜಕೀಯ ಮೀಸಲಾತಿ ನೀಡಬೇಕೆಂದು ಒತ್ತಾಯ ಮಾಡಿದರು.

ದೇವರಾಜ ಅರಸು ಅಭಿವೃದ್ಧಿ ನಿಗಮದಿಂದ ಕೈಗೊಂಡಿರುವ ಚೈತನ್ಯ ಸ್ವಯಂ ಉದ್ಯೋಗ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ಚೈತನ್ಯ ಸಬ್ಸಿಡಿ, ಸಾಫ್ಟ್ ಲೋನ್ ಯೋಜನೆ, ಕಿರುಸಾಲ ಯೋಜನೆ, ಸಾಂಪ್ರದಾಯಿಕ ಕುಶಲಕರ್ಮಿಗಳು ಮತ್ತು ವೃತ್ತಿ ಕಸುಬುದಾರರಿಗೆ ಸಾಲ-ಸಹಾಯಧನ, ಇನ್ನೂ ಇತರೆ ಕಾರ್ಯಕ್ರಮಗಳು ಸ್ಥಗಿತಗೊಂಡಿರುತ್ತವೆ. ಈ ಯೋಜನೆಗಳಿಗೆ ಕೂಡಲೇ ಹಣ ಬಿಡುಗಡೆಗೊಳಿಸಿ ಶೀಘ್ರ ಜಾರಿಗೊಳಿಸಲು ಅವರು ಒತ್ತಾಯಿಸಿದರು.

ಹಿಂದುಳಿದ ವರ್ಗಗಳ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕ್ರಮವಹಿಸುತ್ತಿಲ್ಲ, ಶೀಘ್ರ ಕ್ರಮಕೈಗೊಳ್ಳಲು ಒತ್ತಾಯ ಪಡಿಸುತ್ತೇವೆ. ಇವುಗಳ ಜೊತೆಗೆ ಇನ್ನೂ ಅನೇಕ ಹಿಂದುಳಿದ ವರ್ಗಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿದ್ದು ಕೂಡಲೇ ಇವುಗಳನ್ನು ಮುಂದುವರೆಸಬೇಕೆಂದು ಆಗ್ರಹಿಸಿದರು.

ಪ್ರವರ್ಗ 1 ಮತ್ತು 2ಎ ನಲ್ಲಿ ಸುಮಾರು 2 ಕೋಟಿಯಷ್ಟು ಜನಸಂಖ್ಯೆ ಹೊಂದಿದ್ದು ಕೇವಲ 80 ಕೋಟಿಗಳನ್ನು ಮೀಸಲಿಟ್ಟಿದ್ದು 20 ಕೋಟಿಗಳನ್ನು ಬಿಡುಗಡೆಗೊಳಿಸಿದೆ. ಹಾಗಾಗಿ ಈ ವರ್ಗಗಳ ಅಭಿವೃದ್ಧಿಗಾಗಿ ದೇವರಾಜು ಅರಸು ಅಭಿವೃದ್ಧಿ ನಿಗಮಕ್ಕೆ 2000 ಕೋಟಿಗಳನ್ನು ನೀಡಬೇಕೆಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ಗೌರವಾಧ್ಯಕ್ಷ ಪ್ರೊ. ಎಚ್. ರಾಚಪ್ಪ, ಪ್ರ. ಕಾರ್ಯದರ್ಶಿ ಸಿ ಬಿ ಮನೋಹರ ಕುಮಾರ್, ಸಂಘಟನಾ ಕಾರ್ಯದರ್ಶಿ ಚನ್ನವೀರಪ್ಪ ಗಾಮನಗಟ್ಟಿ, ಸಂಚಾಲಕರಾದ ಜನಮೇಜಿರಾವ್, ರಾಮಕೃಷ್ಣ ಉರಣ್ಕರ್, ಆರ್ ಟಿ ನಟರಾಜ ಹಾಜರಿದ್ದರು.

# ಕುಡಿಯುವ ನೀರು ವಿಷಕಾರಿ: ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿ ಅಸಮಧಾನ



ಶಿಕಾರಿಪುರ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪರವರು ರೈತರ ಹಾಗೂ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೀರಾವರಿಗೆ ಆದ್ಯತೆ ನೀಡಿ ಏತ ನೀರಾವರಿ ಮೂಲಕ ಶಿವಮೊಗ್ಗದ ತುಂಗಾ ನದಿಯಿಂದ ಕುಮುದ್ವತಿ ನದಿ ಮೂಲಕ ಅಂಜನಾಪುರ ಜಲಾಶಯಕ್ಕೆ ನೀರು ತುಂಬಿಸುವ ಕೆಲಸ ಮಾಡಿದ್ದಾರೆ ಆದರೆ, ಈ ನೀರು ರೈತರ ಹೊಲಗದ್ದೆಗೆ ತಲುಪದೇ, ಸಾರ್ವಜನಿಕರಿಗೆ ಕುಡಿತಲು ಬಳಕೆಯಾಗದಷ್ಟು ವಿಷಕಾರಿಯಾಗುತ್ತಿದೆ ಎಂದು ಕೃಷಿ ಭೂಮಿ ಉಳಿಸಿ ಹೋರಾಟ ಸಮಿತಿ ಸಂಚಾಲಕ ಗೋಕುಲ್ ರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ಇಂದು ಪಟ್ಟಣದ ಸುದ್ದಿ ಮನೆಯಲ್ಲಿ ಪತ್ರಿಕಾಗೋಷ್ಠಿ ನಡಿಸಿ ಮಾತನಾಡಿದ ಅವರು, ಬಿ ಎಸ್ ಯಡಿಯೂರಪ್ಪರವರು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವಾಗ ತಾಲ್ಲೂಕೀನ ಏತ ನೀರಾವರಿ ಮೂಲಕ ಶಿವಮೊಗ್ಗದ ತುಂಗಾ ನದಿಯಿಂದ ಕುಮುದ್ವತಿ ನದಿ ಮೂಲಕ ಅಂಜನಾಪುರಕ್ಕೆ ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಿ ನೀರು ತುಂಬಿಸುವ ಕೆಲಸ ಮಾಡಿದ್ದಾರಲ್ಲದೇ, ತರಾತುರಿಯಲ್ಲಿ ಇದರ ಉದ್ಘಾಟನೆಯನ್ನೂ ಸಹ ಮಾಡಿದರು. ಆದರೆ ಇದರ ಉದ್ಘಾಟನೆ ಕಾರ್ಯಕ್ರಮವು ಪ್ರಾಂಯೋಗಿಕವಾಗಿ ಆರಂಭಿಸಿದ ನಂತರ ವೀಡಿಯೋ ಮಾಡಿ ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡಲು ಮಾತ್ರ ಸೀಮಿತವಾಗಿದ್ದು, ಈ ಯೋಜನೆಯಿಂದ ತಾಲ್ಲೂಕಿನ ರೈತರಿಗಾಗಲಿ, ಸಾರ್ವಜನಿಕರಿಗೆ ಕುಡಿಯಲು ಸಹಕಾರಿಯಾಗುತ್ತಿಲ್ಲ. ಅಂಜನಾಪುರ ಜಲಾಶಯದ ಸುತ್ತ ಕೋಳಿ ಫಾರಂಗಳಾಗಿದ್ದು, ಇಲ್ಲಿ ಬಳಸಲ್ಪಡುವ ಕೀಟನಾಶಕಗಳು, ಔಷಧೋಪಚಾರ ಮಾಡಿದ ಟ್ರೈಗಳು ಈ ನೀರಿನಲ್ಲಿ ತೊಳೆಯುವುದರಿಂದ ಅಂಜನಾಪುರ ಜಲಾಶಯದ ನೀರನ್ನು ಕಲುಷಿತ ಮಾಡಲಾಗುತ್ತಿದೆ ಎಂದು ಗಂಭೀರವಾಗಿ ಆರೋಪಿಸಿದರು.

ಮಲೆನಾಡಿನ ತಪ್ಪಲಿಗೆ ಹೊಂದಿಕೊಂಡಿರುವ ತುಂಗಾ ನದಿಯೂ ರಾಜ್ಯದಲ್ಲಿಯೇ ಮೊಟ್ಟ ಮೊದಲಿಗೆ ತುಂಬುವಂತಹಾ ನದಿಯಾಗಿದೆ. ತಾಲ್ಲೂಕಿನಲ್ಲಿ ಈ ಮೊದಲು ಭತ್ತದ ಬೆಳೆಯನ್ನ ಮಳೆಗಾಲದ ಬೆಳೆ ಹಾಗೂ ಬೇಸಿಗೆ ಬೆಳೆ ಎಂದು ಎರಡು ಬೆಳೆಯಾಗಿ ಬೆಳೆಯಲಾಗುತ್ತದೆ ಮಳೆಗಾಲದಲ್ಲಿ ಮಳೆ ನೀರಿನಿಂದ, ಬೇಸಿಗೆಯಲ್ಲಿ ಅಂಜನಾಪುರ ಜಲಾಶಯದ ನೀರನ್ನು ಅವಲಂಭಿತರಾಗಿದ್ದ ರೈತರು ಇತ್ತೀಚಿನ ದಿನಗಳಲ್ಲಿ ಆಡಿಕೆ ಬೆಳೆಗೆ ಮೊರೆ ಹೋಗೀದ್ದಾರೆ. ಆದ್ದರಿಂದ ಮಳೆಯಾಗುತ್ತಿದ್ದಂತೆಯೇ ತುಂಗಾ ನದಿಯಿಂದ ಜೂನ್ ತಿಂಗಳಲ್ಲಿ ಹೊರ ಹರಿಯಲು ಬಿಡುವ ನೀರನ್ನು ಏತ ನೀರಾವರಿ ಮೂಲಕ ಕುಮುದ್ವತಿ ನದಿಯ ಮೂಲಕ ಅಂಜನಾಪುರ ಜಲಾಶಯಕ್ಕೆ ನೀರು ತುಂಬಿಸಿ ಬೇಸಿಗೆ ಬೆಳೆದ ರೈತರ ಹೊಲಗದ್ದೆಗೆ ಪಟ್ಟಣದ ಜನತೆಗೆ ಕುಡಿಯುವ ನೀರು ಒದಗಿಸುವ ಕೆಲಸ ಆಗಬೇಕಿದೆ.

ಅಂಜನಾಪುರ ಜಲಾಶಯದ ನೀರನ್ನೇ ಅವಲಂಬಿತರಾಗಿರುವ ತಾಲ್ಲೂಕಿನಲ್ಲಿ ಭತ್ತ ಬೆಳೆಯುವ ರೈತರು ಈ ಬಾರಿಯ ಮಳೆಗಾಲ ಹಾಗೂ ಬೇಸಿಗೆ ಬೆಳೆ ಬೆಳೆಯಿಂದ ಸಾಕಷ್ಟು ನಷ್ಟ ಅನುಭವಿಸುವಂತಾಗಿದೆ. ಅತಿ ಹೆಚ್ಚಿನ ಮಳೆಯಿಂದ ಸಮಯಕ್ಕೆ ಸರಿಯಾಗಿ ನಾಟಿ ಮಾಡಲಾಗಲಿಲ್ಲ. ಇನ್ನೂ ಬೇಸಿಗೆಯಲ್ಲಿ ಅಂಜನಾಪುರ ಜಲಾಶಯದ ನೀರನ್ನು ಬಳಸಿ ಬೆಳೆ ಬೆಳೆಯಲು ಮುಂದಾದರೆ, ಒಂದೆಡೆ ಪ್ರಕೃತಿ, ಮಳೆ, ಹವಾಮಾನ, ಇವುಗಳೆಲ್ಲವೂ ರೈತರ ಬದುಕಿನಲ್ಲಿ ಹಾವು ಏಣಿಯಾಟವಾಡಿದರೆ, ಮಳೆಗಾಲದ ಅಂತ್ಯದಲ್ಲಿ ಭರ್ತಿಯಾಗಿದ್ದ ಕೆರೆಯ ನೀರು ರೈತರಿಗೆ ಸಮಯಕ್ಕೆ ಸರಿಯಾಗಿ ನೀರು ಬಿಡದೇ ಯಾವಾಗ ಬೇಕು ಅವಾಗ ಜಲಾಶಯದ ನೀರು ಹರಿಬಿಟ್ಟ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ಜಲಾಶಯದಲ್ಲಿ ನೀರಿಲ್ಲದಂತಾಗಿದೆ. ಅನೇಕ ಕಾಲುವೆಗಳಲ್ಲಿ ಗಿಡ ಗಂಟೆಗಳು ಬೆಳೆದು, ಕಸ ಕಡ್ಡಿಗಳು ತುಂಬಿ ನೀರು ಸರಾಗವಾಗಿ ಹರಿಯುದಂತಾಗಿದೆ. ಅಂಜನಾಪುರದ ನೀರು ಬಿಡುವಾ ಮುನ್ನ ಸಭೆ ನಡೆಸಿ ಒಂದು ತೂಬಿಗೆ ಎರಡು ಜನ ರೈತರನ್ನ ಆಯ್ಕೆ ಮಾಡಿ ಅದರ ನಿರ್ವಹಣೆಯನ್ನ ಅವರ ಜವಾಬ್ದಾರಿಯಾಗಿಸಿ ಮೇಲ್ವಿಚಾರಕರಾಗಿ ಅಧಿಕಾರಿಗಳು ಗಮನಿಸಿದಾಗ ಮಾತ್ರ ರೈತರ ಹೊಲಗದ್ದೆಗೆ ಸಮರ್ಪಕವಾಗಿ ನೀರು ಒದಗಿಸಬಹುದು ಎಂದು ಸಲಹೆ ನೀಡಿದರು.

ನಗರದ ಮಾಲತೇಶ್ ಮಾತನಾಡಿ, ಈ ಬಾರಿ ಅತಿ ಹೆಚ್ಚು ಪ್ರಮಾಣದ ಮಳೆಯಾದರೂ ತಾಲ್ಲೂಕಿನಲ್ಲಿ ರೈತರು ಬೇಸಿಗೆಯ ಭತ್ತ ಬೆಳೆಯಲು ಹರ ಸಾಹಸ ಪಡಬೇಕಿದೆ. ಅಂಜನಾಪುರ ಜಲಾಶಯದಿಂದ ಬೇಸಿಗೆಯಲ್ಲಿ ಚಾನಲ್ ಮೂಲಕ ಮೂರು ಬಾರಿ ಬಿಡಬೇಕಿದ್ದ ನೀರು ಕೇವಲ ಒಂದೇ ಒಂದು ಬಾರಿ ಬಿಡಲಾಗಿದೆ. ಅಧಿಕಾರಿಗಳಿಗೆ ಇದನ್ನು ಪ್ರಶ್ನಿಸಿದರೆ ನಾವೇನು ಮಾಡ ಬೇಕು ಜಲಾಶಯದಲ್ಲಿ ನೀರಿಲ್ಲ ಎಂದು ಹಾರಿಕೆಯ ಉತ್ತರ ನೀಡುತ್ತಿದ್ದಾರೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಪವನ್, ಈಶ್ವರ, ನಿಶಾಂತ್, ಜೀವನ್, ಉದಯ ಇದ್ದರು.

# ಜೂನ್ 4 : ನಿಮ್ಮೊಳಗಿನ "ಆಧ್ಯಾತ್ಮಿಕತೆ" ಕುರಿತ ವಿಶಿಷ್ಟ ಕಾರ್ಯಾಗಾರ

ಶಿವಮೊಗ್ಗ : ನಿಮ್ಮೊಳಗಿನ "ಆಧ್ಯಾತ್ಮಿಕತೆ" ಕುರಿತ ವಿಶಿಷ್ಟ ಕಾರ್ಯಾಗಾರವನ್ನು ಜೂನ್ 4 ರಂದು ಬೆಳಿಗ್ಗೆ 9:30 ರಿಂದ ಸಂಜೆ 5 ವರೆಗೆ ಕುವೆಂಪು ರಂಗಮಂದಿರದಲ್ಲಿ ಯೂನಿವರ್ಸಲ್ ನಾಲೇಜ್ ಟ್ರಸ್ಟ್ ಮಂಗಳೂರು ಇವರು ಏರ್ಪಡಿಸಿದ್ದಾರೆ.

ಶುಕ್ರವರ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಟ್ರಸ್ಟ್‌ನ ಮುಖಂಡರು, ಆಧ್ಯಾತ್ಮಿಕ ಶಕ್ತಿಯ ಮೂಲಕ ಧನಾತ್ಮಕವಾಗಿ ಆಂತರಿಕ ಬದಲಾವಣೆಗೆ ಸಹಾಯ ಮಾಡಿ. ಸಕಾರಾತ್ಮಕ ಜೀವನ, ಹೀಲಿಂಗ್, ಆಧ್ಯಾತ್ಮಿಕತೆ ಮತ್ತು ವೈಯಕ್ತಿಕ ಬೆಳವಣಿಗೆಯ ವಿವಿಧ ಹಂತಗಳನ್ನು ಇನ್ನಷ್ಟು ತಿಳಿದುಕೊಳ್ಳಲು ಆಸಕ್ತಿ ಹೊಂದಿರುವವರಿಗೆ ಇದು ಉತ್ತಮ ಅವಕಾಶವಾಗಿದೆ ಎಂದರು.

ಈ ವಿಶಿಷ್ಟ ಕಾರ್ಯಾಗಾರದಲ್ಲಿ ನಾವು ಇದುವರೆಗೆ ಅರ್ಥಮಾಡಿಕೊಳ್ಳಲಾಗದ ದೇಹ ವಿಜ್ಞಾನ ಹಾಗೂ ಆಧ್ಯಾತ್ಮಿಕತೆ, ಇವುಗಳಿಗೆ ಇರುವ ಸಂಬಂಧಗಳನ್ನು ಅರಿಯಲಿದ್ದೇವೆ.ಈ ಮೂಲಕ ಬಹು ದಿನಗಳು, ಬಹು ತಿಂಗಳುಗಳು, ಬಹು ವರ್ಷಗಳಿಂದ ಗುಣಪಡಿಸಲಾಗದ ಖಾಯಿಲೆಗಳು, ವ್ಯಸನಗಳು, ಮಾನಸಿಕ ಖಿನ್ನತೆ, ಸಂಬಂಧಗಳಲ್ಲಿ ಉಂಟಾಗಿರುವ ಬಿರುಕು ಇತ್ಯಾದಿಗಳನ್ನು ಯಾವುದೇ ಔಷದೋಪಚಾರಗಳಿಲ್ಲದೇ ಸ್ವಯಂ ಗುಣಪಡಿಸಿಕೊಳ್ಳುವ ಶಕ್ತಿಯನ್ನು ಈ ದೇಹ ಹೊಂದಿದೆ ಎಂಬುದರ ಮಹತ್ವವನ್ನು ಉನ್ನತ ತರಬೇತುದಾರರು ತಿಳಿಸಿಕೊಡಲಿದ್ದಾರೆ ಎಂದು ವಿವರಿಸಿದರು.

ಯುನಿವರ್ಸಲ್ ನಾಲೆಡ್ಜ್ ಟ್ರಸ್ಟ್‌ನ ಮಾಸ್ಟರ್ ಟ್ರೈನರ್‌ಗಳ ತಂಡ ಹಾಗೂ ನೇಚರ್ ಪಾಸಿಟಿವ್ ಎನರ್ಜಿ ಹೀಲಿಂಗ್ ವಿಧಾನಗಳ ಅನುಭವಿ ಮಾರ್ಗದರ್ಶಕರು ಉಪಸ್ಥಿತರಿದ್ದು ತಮ್ಮ ಜ್ಞಾನ ಮತ್ತು ಪರಿಣತಿಯನ್ನು ಪಾಲ್ಗೊಳ್ಳುವವರೊಂದಿಗೆ ಹಂಚಿಕೊಳ್ಳಲಿದ್ದಾರೆ. ಈ ಅಭ್ಯಾಸಗಳು ನೀಡುವ ಅದ್ಭುತ ಪ್ರಯೋಜನಗಳ ಪ್ರಾತ್ಯಕ್ಷಿಕೆ ನೀಡಲಿದ್ದಾರೆ ಎಂದು ಹೇಳಿದರು.

ಈ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸುವ ಎಲ್ಲರೂ ಹೆಚ್ಚಿನ ಜ್ಞಾನವನ್ನು ಪಡೆದು ಹೆಚ್ಚಿನ ಮಾನಸಿಕ ಧೃಡತೆಯೊಂದಿಗೆ ಪರಿವರ್ತನೆಯ ಅನುಭವವನ್ನು ಹೊಂದಲಿದ್ದಾರೆ. ಸಕಾರಾತ್ಮಕ ಜೀವನ, ಹೀಲಿಂಗ್ಸ್, ಆಧ್ಯಾತ್ಮಿಕತೆ ಮತ್ತು ವೈಯಕ್ತಿಕ ಬೆಳವಣಿಗೆಯ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಆಸಕ್ತಿ ಹೊಂದಿರುವವರಿಗೆ ಇದು ಉತ್ತಮ ಅವಕಾಶವಾಗಿದೆ ಎಂದರು.

ಈ ಕಾರ್ಯಾಗಾರಗಳು ಹುಬ್ಬಳ್ಳಿ, ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಯಶಸ್ವಿಯಾಗಿ ನಡೆದಿದ್ದು ನೂರಾರು ಫಲಾನುಭವಿಗಳು ಇದರ ಪ್ರಯೋಜನ ಪಡೆದಿರುತ್ತಾರೆ. ಈ ಕಾರ್ಯಾಗಾರಕ್ಕೆ ಆಹ್ವಾನ ಪತ್ರಿಕೆಯೊಂದಿಗೆ ಉಚಿತ ಪ್ರವೇಶವಿದ್ದು ಭಾಗವಹಿಸುವ ಆಸಕ್ತಿ ಹೊಂದಿದ್ದಲ್ಲಿ 9632171156 ಅಥವಾ 9448139271ನ್ನು ಸಂಪರ್ಕಿಸಬಹುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟಿನ ಅಧ್ಯಕ್ಷೆ ಶಮ್ಮಿ ಶಿರಿ, ಕಾರ್ಯದರ್ಶಿ ಕೃಷ್ಣಾನಂದ ಶೆಣೈ, ಕಾರ್ಯಕ್ರಮ ಆಯೋಜಕ ನಾಗರಾಜ ಶೆಟ್ಟರ್, ರೋಹನ್ ಶಿರಿ, ಸುಲತಾ ಶೆಣೈ ಹಾಜರಿದ್ದರು.

# ಚುನಾವಣೆ ಸಮಯದಲ್ಲಿ ಬೊಮ್ಮಾಯಿ ಕೊಟ್ಟ ಭರವಸೆ ರೈತರ ಕಿವಿಗೆ ಹೂವಿಡಲು : ಬೇಳೂರು ಗೋಪಾಲಕೃಷ್ಣ



ಸಾಗರ : ಚುನಾವಣೆ ಸಂದರ್ಭದಲ್ಲಿ ಬಸವರಾಜ ಬೊಮ್ಮಾಯಿ ಶರಾವತಿ ಮುಳುಗಡೆ ಸಂತ್ರಸ್ತರ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದು ಮತಗಳಿಸಲು ರೈತರ ಕಿವಿ ಮೇಲೆ ಹೂವಿಡುವ ತಂತ್ರವಾಗಿತ್ತು ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ತಿಳಿಸಿದರು.

ಇಲ್ಲಿನ ತಾಲ್ಲೂಕು ಪಂಚಾಯ್ತಿ ಆವರಣದಲ್ಲಿ ಬುಧವಾರ ಶಾಸಕರ ನೂತನ ಕಚೇರಿ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಹಿಂದಿನ ಶಾಸಕರು ತಾವು ಮುಳುಗಡೆ ಸಂತ್ರಸ್ತ ಕುಟುಂಬದವರು, ಸಮಸ್ಯೆ ಬಗೆಹರಿಸುತ್ತೇನೆ ಎಂದು ಹೇಳಿರುವುದು ಹುಸಿಯಾಗಿದೆ ಎಂದು ಹೇಳಿದರು.

ಡಬಲ್ ಇಂಜಿನ್ ಸರ್ಕಾರವಿದ್ದು, ಮುಳುಗಡೆ ಸಂತ್ರಸ್ತರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ರಾಜ್ಯ ಸರ್ಕಾರ ತಿಳಿಸಿತ್ತು. ಇದೀಗ ಕೇಂದ್ರ ಸರ್ಕಾರ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದು ಮುಳುಗಡೆ ಸಂತ್ರಸ್ತ ರೈತರಿಗೆ ಮಾಡಿದ ದ್ರೋಹವಾಗಿದೆ. ಬಿಜೆಪಿ ಸರ್ಕಾರದ ಮುಖ್ಯಮಂತ್ರಿಗಳು, ಸಂಸದರು, ಹಿಂದಿನ ಶಾಸಕರು ಎಲ್ಲರೂ ರೈತರಿಗೆ ಮೋಸ ಮಾಡಿದ್ದಾರೆ. ನಮ್ಮ ಸರ್ಕಾರದ ಅವಧಿಯಲ್ಲಿ ಮುಳುಗಡೆ ಸಂತ್ರಸ್ತ ರೈತರ ಸಮಸ್ಯೆಯನ್ನು ಬಗೆಹರಿಸಲಾಗುತ್ತದೆ. ಮುಖ್ಯಮಂತ್ರಿಗಳಿಗೆ, ಉಪ ಮುಖ್ಯಮಂತ್ರಿಗಳಿಗೆ ಸಮಸ್ಯೆ ಅರಿವಿದ್ದು, ಸದ್ಯದಲ್ಲಿಯೆ ಈ ಬಗ್ಗೆ ಕಾಗೋಡು ತಿಮ್ಮಪ್ಪ ಅವರ ಮಾರ್ಗದರ್ಶನದಲ್ಲಿ ಸಭೆ ಕರೆದು ಮುಳುಗಡೆ ಸಂತ್ರಸ್ತರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಲಾಗುತ್ತದೆ ಎಂದರು.

ಕಾಂಗ್ರೆಸ್ ಘೋಷಣೆ ಮಾಡಿದ ಗ್ಯಾರೆಂಟಿ ಯೋಜನೆ ಜಾರಿಗೆ ತರುವುದು ಖಚಿತ. ಐದು ಗ್ಯಾರೆಂಟಿಗಳ ಅನುಷ್ಠಾನಕ್ಕೆ ಸುಮಾರು 50ಸಾವಿರ ಕೋಟಿ ರೂ. ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ಎಲ್ಲಾ ಯೋಜನೆಗಳನ್ನು ಜಾರಿಗೆ ತರಲಾಗುತ್ತದೆ. ಇದಕ್ಕೆ ಕನಿಷ್ಟ ಒಂದು ತಿಂಗಳು ಕಾಲಾವಕಾಶ ತಗಲಿದರೂ ಅಚ್ಚರಿಯಿಲ್ಲ. ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿದ ಭರವಸೆ ಈಡೇರಿಸುವುದು ಖಚಿತ ಎಂದು ಹೇಳಿದರು.

ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಪ್ರಮುಖರಾದ ಚೇತನರಾಜ್ ಕಣ್ಣೂರು, ಮಲ್ಲಿಕಾರ್ಜುನ ಹಕ್ರೆ, ಸುರೇಶಬಾಬು, ಮಧುಮಾಲತಿ, ಅನಿತಾಕುಮಾರಿ, ಸುಮಂಗಲ ರಾಮಕೃಷ್ಣ, ಅಶೋಕ ಬೇಳೂರು, ತಾರಾಮೂರ್ತಿ, ಕೆ.ವಿ.ಜಯರಾಮ್, ಗಣಪತಿ ಮಂಡಗಳಲೆ ಇನ್ನಿತರರು ಹಾಜರಿದ್ದರು.



**ವಿದ್ಯುತ್ ಇಲಾಖೆ ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ-84) ಶಿವಮೊಗ್ಗ ವತಿಯಿಂದ ಸಂಘದ ಸದಸ್ಯರಾದ ಲಿಂಗೈಕ್ಯ ಶರಣ ಹಾಲಸ್ವಾಮಿ ಎಂ. ಹಿರೇವುಡಾ ಗ್ರಾಮ, ಚನ್ನಗಿರಿ ತಾಲೂಕ್, ದಾವಣಗೆರೆ ಜಿಲ್ಲೆ. ಇವರು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಕಿರಿಯ ಪವರ್ ಮ್ಯಾನ್ ಆಗಿ ವಿನೋಭನಗರ, ಘಟಕ-7, ನಗರ ಉಪ ವಿಭಾಗ -3, ಮೆಸ್ಕಾಂ ಶಿವಮೊಗ್ಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ 14.04.2023 ರಂದು ವಿದ್ಯುತ್ ಅಪಘಾತದಲ್ಲಿ ದೈವಾಧೀನರಾಗಿದ್ದು, ಸಂಘದ ವತಿಯಿಂದ ಮೃತರ ತಾಯಿಯವರಾದ ಶ್ರೀಮತಿ ಶರಣೆ ಹಾಲಮ್ಮ ರವರಿಗೆ ? 1,00,000/- ಒಂದು ಲಕ್ಷ ಮೌಲ್ಯದ ಡಿ.ಡಿ.ಯನ್ನು ದಿನಾಂಕ 30.05.2023ರ ಸಂಜೆ ಸಂಘದ ಅಧ್ಯಕ್ಷರು, ಕಾರ್ಯಕಾರಿ ಮಂಡಳಿ ಹಾಗೂ ಎಲ್ಲಾ ಸದಸ್ಯರ ಪರವಾಗಿ ವಿತರಿಸಲಾಯಿತು.**

## ಸಾಗರ ಕಾಲೇಜಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಸಾಗರ : ಇಲ್ಲಿನ ಲಾಲ್ ಬಹದ್ದೂರ್ ಕಲಾ ವಿಜ್ಞಾನ ಮತ್ತು ಎಸ್.ಬಿ. ಸೊಲಬಣ್ಣ ಶೆಟ್ಟಿ ವಾಣಿಜ್ಯ ಮಹಾವಿದ್ಯಾಲಯದ 2023-24ನೇ ಸಾಲಿನ ಬಿ.ಎ., ಬಿ.ಕಾಂ. ಮತ್ತು ಬಿ.ಎಸ್ಸಿ. ಪದವಿಗಳ ಮೊದಲ ಸೆಮಿಸ್ಟರ್ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಪ್ರವೇಶಕ್ಕೆ ಬೇಕಾದ ಅಗತ್ಯ ಮಾಹಿತಿಯನ್ನು ಕಾಲೇಜಿನ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಈ ಸಂಬಂಧ ಅಗತ್ಯವಾದ ತಾಂತ್ರಿಕ ಸಹಕಾರ ಕಾಲೇಜಿನಲ್ಲಿ ನೀಡಲಾಗುತ್ತದೆ.

ಕಾಲೇಜಿನಿಂದ ಮೊಬೈಲ್, ಈ-ಮೇಲ್ ಸಂದೇಶವನ್ನು ಕಳಿಸಲಾಗುತ್ತದೆ. ಪೂರಕವಾದ ಮೂಲ ಮತ್ತು ಜೆರಾಕ್ಸ್ ದಾಖಲಾತಿಗಳೊಂದಿಗೆ ನಿಗಧಿಪಡಿಸಿದ ದಿನಾಂಕದಂದು ಕಾಲೇಜಿಗೆ ಬಂದು ಪರಿಶೀಲನೆಗೆ ಸಲ್ಲಿಸಬೇಕು. ಪ್ರವೇಶ ಪ್ರಕ್ರಿಯೆಯು ಸಂಪೂರ್ಣವಾಗಿ ಆನ್‌ಲೈನ್ ಮೂಲಕವೇ ನಡೆಯಲಿದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಮೊ. 9731951412, 7892311454 ಗೆ ಸಂಪರ್ಕಿಸಬಹುದು.

## ವಿದ್ಯುತ್ ವ್ಯತ್ಯಯ

ಶಿವಮೊಗ್ಗ : ಜೂನ್ 04 ರಂದು ಆಲ್ಕೊಳ ವಿವಿ ಕೇಂದ್ರದಲ್ಲಿ ಮೂರನೇ ತ್ರೈಮಾಸಿಕ ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಕೆಳಕಂಡ ಪ್ರದೇಶಗಳಲ್ಲಿ ಅಂದು ಬೆಳಿಗ್ಗೆ 10 ಗಂಟೆಯಿಂದ 6 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಆಲ್ಕೊಳ, ಸಾಗರ ರಸ್ತೆ, ಗುತ್ಯಪ್ಪ ಕಾಲೋನಿ, ನೇತಾಜಿ ವೃತ್ತ, ನೀಲಮೇಘಮ್ ಲೇಔಟ್, ರಾಜಮಹಲ್ ಬಡಾವಣೆ, ಪೊಲೀಸ್ ಲೇಔಟ್, ಕೆಹೆಚ್‌ಬಿ, ಅಲ್ ಹರೀಮ್ ಲೇಔಟ್, ವಿಜಯನಗರ, ಜೆ.ಪಿ.ನಗರ, ಜಿ.ಜಿ.ಬಡಾವಣೆ, ಎಸ್.ವಿ.ಬಡಾವಣೆ, ಗಾಡಿಕೊಪ್ಪ, ನಂಜಪ್ಪ ಹೆಲ್ತ್ ಕೇರ್, ಶರಾವತಿ ದಂತ ವೈದ್ಯಕೀಯ ಕಾಲೇಜು, ಮಲ್ಲಿಗೇನಹಳ್ಳಿ, ದೇವಕಾತಿಕೊಪ್ಪ, ಶ್ರೀರಾಮ್‌ಪುರ, ವಿರುಪಿನಕೊಪ್ಪ, ಸಿದ್ಲಿಪುರ, ಮುದ್ದಿನಕೊಪ್ಪ, ತ್ಯಾವರೆಕೊಪ್ಪ, ಸಿಂಹಧಾಮ, ಗುಡ್ಡದಾರಿಕೊಪ್ಪ, ಗಾಲ್ಫ್ ಸ್ಟೇಡಿಯಂ, ಭೂಮಿಕಾ ಇಂಡಸ್ಟ್ರಿ, ಪೆಸಿಟ್ ಕಾಲೇಜ್, ಕೋಟೆ ಗಂಗೂರು, ಗೆಜ್ಜೇನಹಳ್ಳಿ, ಬಸವಗಂಗೂರು, ಸೋಮಿನಕೊಪ್ಪ, ಆದರ್ಶನಗರ, ಸಹ್ಯಾದ್ರಿ ನಗರ, ಜೆ.ಹೆಚ್.ಪಟೇಲ್ ಬಡಾವಣೆ, ಕಾಶೀಪುರ, ಕಲ್ಲಹಳ್ಳಿ, ಶಿವಪ್ಪನಾಯಕ ಬಡಾವಣೆ, ಪ್ರಿಯದರ್ಶಿನಿ ಲೇಔಟ್, ಇಂದಿರಾಗಾಂಧಿ ಲೇಔಟ್, ವಿನೋಬನಗರ, ದಾಮೋದರ್ ಕಾಲೋನಿ, ಚೇತನಾ ಸ್ಕೂಲ್, ಕಲ್ಲಹಳ್ಳಿ, ವಿನೋಬನಗರ 60 ಅಡಿ ರಸ್ತೆ, ಜೈಲ್ ಸರ್ಕಲ್, ಆಟೋ ಕಾಂಪ್ಲೆಕ್ಸ್, ದೈವಜ್ಞ ವೃತ್ತ, ಶರಾವತಿ ನಗರ, ಪೊಲೀಸ್ ಚೌಕಿ, ಮೇದಾರ ಕೇರಿ, ನರಸಿಂಹ ಬಡಾವಣೆ, ಶಾರದಮ್ಮ ಲೇಔಟ್, ಕನಕನಗರ, ದೇವರಾಜ್ ಅರಸ್ ಬಡಾವಣೆ, ಪಿ ಅಂಡ್ ಟಿ ಕಾಲೋನಿ, ಸೂರ್ಯ ಲೇಔಟ್, ಅರವಂದ ನಗರ, ಇಂಡಸ್ಟ್ರಿಯಲ್ ಏರಿಯಾ, ಎಪಿಎಂಸಿ, ವೀರಣ್ಣ ಲೇಔಟ್, ಕಾಶೀಪುರ, ಜಯದೇವ ಬಡಾವಣೆ, ಮೆಗ್ಗಾನ್ ಆಸ್ಪ್ರೆ, ಬೂಸ್ಟರ್ ಪಂಪ್‌ಹೌಸ್, ಕುವೆಂಪು ರಸ್ತೆ, ನರ್ಸ್ ಕ್ವಾಟ್ರರ್ಸ್, ಆಲ್ಕೊಳ ವೃತ್ತ, ಸಹ್ಯಾದ್ರಿನಗರ, ಸಹಕಾರಿ ನಗರ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಮೆಸ್ಕಾಂ ಪ್ರಕಟಣೆ ತಿಳಿಸಿದೆ.

## ನಿಗಧಿತ ಸಮಯಕ್ಕೆ ಕಾಲೇಜಿನ ಮುಖ್ಯದ್ವಾರ ಬಂದ್ ಖಂಡಿಸಿ ಪ್ರತಿಭಟನೆ



ಸಾಗರ : ನಿಗಧಿತ ಸಮಯಕ್ಕೆ ಕಾಲೇಜಿನ ಮುಖ್ಯದ್ವಾರ ಬಂದ್ ಮಾಡುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಸಮಸ್ಯೆಯನ್ನು ಖಂಡಿಸಿ ವಿದ್ಯಾರ್ಥಿ ಒಕ್ಕೂಟದಿಂದ ದಿಢೀರ್ ಪ್ರತಿಭಟನೆ ನಡೆಸಲಾಯಿತು.

ಇಲ್ಲಿನ ಬಿ.ಎಚ್.ರಸ್ತೆಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮುಖ್ಯದ್ವಾರವನ್ನು ಪ್ರತಿದಿನ ಬೆಳಿಗ್ಗೆ 10ಕ್ಕೆ ಮುಚ್ಚಲಾಗುತ್ತಿದ್ದು, ನಂತರ ಬಂದ ವಿದ್ಯಾರ್ಥಿಗಳಿಗೆ ಕಾಲೇಜಿಗೆ ಪ್ರವೇಶಾತಿ ನೀಡುತ್ತಿಲ್ಲ. ಕಾಲೇಜಿಗೆ ಗ್ರಾಮೀಣ ಪ್ರದೇಶದಿಂದ ಹೆಚ್ಚಿನ ವಿದ್ಯಾರ್ಥಿಗಳು ಬರುತ್ತಿದ್ದು, ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲದೆ ಇರುವುದರಿಂದ ನಿಗಧಿತ ಸಮಯಕ್ಕೆ ಕಾಲೇಜಿಗೆ ಬರಲು ಸಾಧ್ಯವಾಗುತ್ತಿಲ್ಲ. ಐದತ್ತು ನಿಮಿಷ ವಿಳಂಬವಾಗಿ ಬಂದರೂ ಕಾಲೇಜಿನ ಒಳಗೆ ಬಿಡುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಪಾಠ ತಪ್ಪಿ ಹೋಗುವ ಜೊತೆಗೆ ಹಾಜರಾತಿ ಕೊರತೆ ಸಹ ಉಂಟಾಗುತ್ತಿದೆ. ಈ ಬಗ್ಗೆ ಸಾಕಷ್ಟು ಬಾರಿ ಪ್ರಾಚಾರ್ಯರಿಗೆ ಮನವಿ ಮಾಡಿದ್ದಾಗ್ಯೂ ಅವರು ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ದಿಢೀರ್ ಪ್ರತಿಭಟನೆ ನಡೆಸಿದ್ದಾಗಿ ವಿದ್ಯಾರ್ಥಿಗಳು ತಿಳಿಸಿ, ಶಾಸಕರು ಸ್ಥಳಕ್ಕೆ ಆಗಮಿಸಿ ಸಮಸ್ಯೆ ಬಗೆಹರಿಸಲು ಪಟ್ಟು ಹಿಡಿದರು.

ಸ್ಥಳಕ್ಕೆ ಬಂದ ಶಾಸಕ ಗೋಪಾಲಕೃಷ್ಣ ಬೇಳೂರು ವಿದ್ಯಾರ್ಥಿಗಳ ಅಹವಾಲು ಆಲಿಸಿ, ಪ್ರಾಚಾರ್ಯ ಡಾ. ಸಣ್ಣಹನುಮಪ್ಪ ಜೊತೆ ಮಾತುಕತೆ ನಡೆಸಿ, ಮಂಗಳವಾರದಿಂದ ಬೆಳಿಗ್ಗೆ 10-30ರತನಕ ಕಾಲೇಜಿನ ಮುಖ್ಯದ್ವಾರ ತೆರೆದಿರುತ್ತದೆ. ವಿದ್ಯಾರ್ಥಿಗಳು ಅರ್ಧ ಗಂಟೆ ವಿಳಂಬವಾಗಿ ಬಂದರೂ ಅವರಿಗೆ ಪ್ರವೇಶಾತಿ ಸಿಗುತ್ತದೆ. ಬಸ್ ವಿಳಂಬವಾಗುತ್ತಿರುವುದರ ಬಗ್ಗೆ ಸಂಬಂಧಪಟ್ಟ ಸಾರಿಗೆ ಸಂಸ್ಥೆ ಅಧಿಕಾರಿಗಳ ಜೊತೆ ಚರ್ಚೆ ನಡೆಸಿ ಸಮಸ್ಯೆ ಬಗೆರಹರಿಸುವ ಭರವಸೆ ನೀಡಿದ ನಂತರ ವಿದ್ಯಾರ್ಥಿಗಳು ಪ್ರತಿಭಟನೆ ಹಿಂದಕ್ಕೆ ತೆಗೆದುಕೊಂಡರು.

ಈ ಸಂದರ್ಭದಲ್ಲಿ ವಿದ್ಯಾರ್ಥಿ ಒಕ್ಕೂಟದ ಚಿನ್ಮಯ್, ಅಜಿತ್ ಕೇಶವ್, ವಾಗೇಶ್, ಅಜಿತ್ ಎಂ.ಎನ್., ಚೇತನ್, ಧ್ಯಾನ್, ಸನತ್, ಸುಧೀರ್ ಇನ್ನಿತರರು ಹಾಜರಿದ್ದರು.

Printed by: Vinoda S.L., Sri Maruti Nilaya, 3rd Cross, 3rd Main, Vinobanagara, Shivamogga - 577204 Karnataka
Published by: Vinoda S.L., Sri Maruti Nilaya, 3rd Cross, 3rd Main. Vinobanagara, Shivamogga - 577204, Karnataka, on behalf off Vinoda S.L., and
Printed at: Suddi bharathi Publishers, opp : mandli, kallur Industrial Area, Shivamogga 577202. Karnataka. Published at: Sri Maruti Nilaya, 3rd Cross, 3rd Main, Vinobanagara, Shivamogga - 577204. Karnataka. Editor Vinoda S.L., Sri Maruti Nilaya, 3rd Cross, 3rd Main, Vinobanagara, Shivamogga - 577204. Karnataka